ಸಂಪುಟ 01 | ಸಂಚಿಕೆ 171 ಮಂಗಳವಾರ 25 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಸೆಕೆಂಡ್‌ಹ್ಯಾಂಡ್ ಉಡುಪು ದಿನ National Secondhand Wardrobe Day ಅನ್ನು ಪ್ರತಿವರ್ಷ ಆಗಸ್ಟ್ 25ರಂದು ಆಚರಿಸಲಾಗುತ್ತದೆ. ಈ ದಿನವು ಬಳಸಿದ ಅಥವಾ ಪೂರ್ವಸ್ವಾಮ್ಯದ (pre-loved) ಬಟ್ಟೆಗಳನ್ನು ಖರೀದಿಸುವುದು, ಮರುಬಳಕೆ ಮಾಡುವುದು ಮತ್ತು ದಾನ ಮಾಡುವುದರ ಮೂಲಕ ಸುಸ್ಥಿರ ಫ್ಯಾಷನ್ ಅನ್ನು ಉತ್ತೇಜಿಸುತ್ತದೆ. ಇದು ಬಟ್ಟೆ ತ್ಯಾಜ್ಯವನ್ನು ಕಡಿಮೆ ಮಾಡಲು ಮತ್ತು ಪರಿಸರ ಸಂರಕ್ಷಣೆಗೆ ಸಹಾಯ ಮಾಡುತ್ತದೆ.

2)ರಾಷ್ಟ್ರೀಯ ಬನಾನಾ ಸ್ಪ್ಲಿಟ್ ದಿನ (National Banana Split Day): ಬಾಳೆಹಣ್ಣು, ಐಸ್‌ಕ್ರೀಮ್ ಮತ್ತು ವಿವಿಧ ಸಿಹಿ ಪದಾರ್ಥಗಳಿಂದ ತಯಾರಿಸುವ ಪ್ರಸಿದ್ಧ ಬನಾನಾ ಸ್ಪ್ಲಿಟ್ ಸಿಹಿತಿಂಡಿಯನ್ನು ಸವಿದು ಸಂಭ್ರಮಿಸುವ ಆಹಾರ ವಿಶೇಷ ದಿನ.

3)ರಾಷ್ಟ್ರೀಯ ಉದ್ಯಾನ ಸೇವಾ ಸ್ಥಾಪಕರ ದಿನ (National Park Service Founders Day):
ಅಮೆರಿಕದ ರಾಷ್ಟ್ರೀಯ ಉದ್ಯಾನಗಳನ್ನು ನಿರ್ವಹಿಸಲು 1916ರಲ್ಲಿ ಅಧ್ಯಕ್ಷ ವುಡ್ರೋ ವಿಲ್ಸನ್ ಸಹಿ ಮಾಡಿದ ಕಾನೂನನ್ನು ಸ್ಮರಿಸುವ ದಿನ.

## ಸುಭಾಷಿತ

ಒಮ್ಮೆ ನೀವು ಯಾವುದಾದರೂ ಕೆಲಸ ಮಾಡಲು ಪ್ರಾರಂಭಿಸಿದ ಬಳಿಕ ಸೋಲಿನ ಬಗ್ಗೆ ಭಯ ಪಡಬೇಡಿ ಅಥವಾ ಹಿಂದಡಿ ಇಡಬೇಡಿ

–ಚಾಣಕ್ಯ

# ಶಕ್ತಿ ಸೌಧಕ್ಕೆ ಮುತ್ತಿಗೆ ಯತ್ನ : ಬಿಜೆಪಿ ನಾಯಕರು ವಶಕ್ಕೆ

❏ ನೈಜ್ಯ ದೇಸೆ ನ್ಯೂಸ್



ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಸಚಿವ ಬಿ. ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ನಾಯಕರು ತಮ್ಮ ಹೋರಾಟ ತೀವ್ರಗೊಳಿಸಿದ್ದು, ವಿಪಕ್ಷ ನಾಯಕ ಆರ್. ಅಶೋಕ್ , ಬಿಜೆಪಿ ರಾಜ್ಯ ಅಧ್ಯಕ್ಷ ಬಿ ವೈ ವಿಜಯೇಂದ್ರ ಸಿಟಿ ರವಿ ಸೇ–ರಿದಂತೆ ಹಲವು ಬಿಜೆಪಿ ನಾಯಕರು, ಕಾರ್ಯಕರ್ತರು ವಿಧಾನಸೌಧ ಮುತ್ತಿಗೆ ಹಾಕಲು ಯತ್ನಿಸಿದರು.

ವಿಕಾಸಸೌಧ ಗೇಟ್ ಮುಂಭಾಗದ ರಸ್ತೆಯಲ್ಲಿಯೇ ಕುಳಿತು ವಿರೋಧ ಪಕ್ಷದ ನಾಯಕ ಆರ್ ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ,ಸಿಟಿ ರವಿ, ಎನ್.ರವಿಕುಮಾರ್ ಸೇ–ರಿದಂತೆ ನಾಯಕರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿ ವಿಧಾನಸೌಧದತ್ತ ನುಗ್ಗಲು ಯತ್ನಿಸಿದರು.ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ವಾಗ್ವಾದ ನಡೆಯಿತು. ಬಳಿಕ ಪೊಲೀಸರು ನಾಯಕರನ್ನು ವಶಕ್ಕೆ ಪಡೆದು ಬಿಎಂಟಿಸಿ ಬಸ್‌ಗಳಲ್ಲಿ ಹೈಗ್ರೌಂಡ್ಸ್ ಠಾಣೆಗೆ ಕರೆದೊಯ್ದರು.

ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಏಕಕಾಲಕ್ಕೆ ಮೂರು ಪ್ರತ್ಯೇಕ ತಂಡಗಳಲ್ಲಿ ಕಾರ್ಯಾಚರಣೆ ನಡೆಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಬಿಜೆಪಿ ಮಾಸ್ಟರ್ ಪ್ಲಾನ್ ರೂಪಿಸಿತ್ತು. ಅದರಂತೆ ವಿಧಾನ ಪರಿಷತ್ ವಿರೋಧ ಪಕ್ಷ ನಾಯಕ ಚಲವಾದಿ ನಾರಾಯಣ ಸ್ವಾಮಿ ಸೇ–ರಿದಂತೆ ಹಲವು ನಾಯಕರಿದ್ದ ತಂಡ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿದರೇ ಇನ್ನುಳಿದ ಸಿ.ಟಿ.ರವಿ ಹಾಗೂ ಬಿ.ವೈ.ವಿಜಯೇಂದ್ರ ನೇತೃತ್ವದ ಎರಡು ತಂಡಗಳು ವಿಧಾನಸೌಧದ ಪ್ರಮುಖ ಗೇಟ್‌ಗಳ ಬಳಿ ಏಕಾಏಕಿ ಮುತ್ತಿಗೆ ಹಾಕಲು ಯತ್ನಿಸಿದವು.ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಪ್ರತಿಭಟನಾಕಾರರನ್ನು ಕೊಂಡೊಯ್ಯಲು ಬಿಎಂಟಿಸಿ ಬಸ್‌ಗಳನ್ನು ಸ್ಥಳದಲ್ಲಿ ಕಾಯ್ದಿರಿಸಲಾಗಿತ್ತು.

ಪ್ರತಿಭಟನೆ ತೀವ್ರಗೊಳ್ಳುವ ಮುನ್ಸೂಚನೆ ಸಿಗುತ್ತಿದ್ದಂತೆಯೇ ನಗರ ಪೊಲೀಸರು ವಿಧಾನಸೌಧ ಹಾಗೂ ಫ್ರೀಡಂ ಪಾರ್ಕ್ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು. ಪ್ರತಿಭಟನಾಕಾರರನ್ನು ತಕ್ಷಣವೇ ವಶಕ್ಕೆ ಪಡೆಯಲು ಸ್ಥಳದಲ್ಲಿ ಸಾಲು ಸಾಲು ಬಿಎಂಟಿಸಿ ಬಸ್‌ಗಳನ್ನು ನಿಯೋಜಿಸಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ.

ಅಲ್ಲದೆ,ಬಿಜೆಪಿ ನಾಯಕರು ಮುತ್ತಿಗೆ ಯತ್ನದಿಂದಾಗಿ ವಿಧಾನಸೌಧದ ಸುತ್ತಮುತ್ತ ತೀವ್ರ ಸಂಚಾರ ದಟ್ಟಣೆ ಉಂಟಾಯಿತು.ವಿಶೇಷವಾಗಿ ಶಾಸಕರು ಪ್ರವೇಶಿಸುವ ದ್ವಾರದ ಬಳಿ ವಾಹನ ಸವಾರರು ಹಾಗೂ ಜನಸಾಮಾನ್ಯರು ಪರದಾಡುವಂತಾಯಿತು.

# ತಿಮ್ಮಾಪುರ ಗ್ರಾಮಸ್ಥರಿಂದ ಮಳೆರಾಯನ ಕೃಪೆಗಾಗಿ ಸಪ್ತಭಜನೆ

❏ ನೈಜ್ಯ ದೇಸೆ ನ್ಯೂಸ್



ಮುಂಗಾರು ಮಳೆ ಬಾರದ ಹಿನ್ನೆಲೆ ರೈತರಲ್ಲಿ ಆತಂಕ ಮನೆ ಮಾಡಿದ್ದು, ಮಳೆಯಿಲ್ಲದೆ ಬೆಳೆ ಇಲ್ಲ ಬೆಳೆ ಇಲ್ಲದೆ ರೈತರ ಜೀವನ ಇಲ್ಲ, ಗ್ರಾಮೀಣ ಪ್ರದೇಶಗಳಲ್ಲಿ ಮಳೆ ಆಧಾರಿತ ಬೆಳೆ ಬೆಳೆಯುವ ರೈತ ಜನಾಂಗಕ್ಕೆ ವರುಣ ಕೃಪೆ ತೋರಲೆಂದು ಆ.24 ಸೋಮವಾರ ಬೆಳಗಿನ ಜಾವ 6 ಗಂಟೆಯಿಂದ ಮುಂದಿನ ಶನಿವಾರ ಬೆಳಿಗ್ಗೆ 8 ಗಂಟೆವರೆಗೂ ತಾಲೂಕಿನ ಸುಕ್ಷೇತ್ರ ತಿಮ್ಮಾಪುರ ಗ್ರಾಮದ ಶ್ರೀಅವಧೂತ ಅಯ್ಯಪ್ಪ ತಾತನವರ ದೇವಸ್ಥಾನದಲ್ಲಿ ಮಹಾಲಕ್ಷ್ಮಿ ಸಿದ್ದಯ್ಯಸ್ವಾಮಿಯವರ ಕಳಸದೊಂದಿಗೆ 7 ಜನ ಸೇರಿ, 7 ಪಾಳೇಗಳನ್ನು ಮಾಡಿ, 24ಗಂಟೆಗಳ ಕಾಲ ಬಾವಿ ನೀರು ಸ್ನಾನ ಮಾಡಿ ಸಪ್ತ ಭಜನೆ ಮಾಡಿದರು.

ವೀರೇಶ ತಂದೆ ರುದ್ರಪ್ಪ ಪಲ್ಯದ ಇವರು ಗ್ರಾಮದ ಅಗಸಿಯೊಳಗಿನ ಬಾವಿಯಿಂದ 101 ಕೊಡದ ನೀರು ತಂದು, ತಾತನವರ ಕತ್ರು ಗದ್ದುಗೆಗೆ ಹಾಕುವ ಮೂಲಕ ವರುಣನಿಗೆ ಸ್ವಾಗತ ಬಯಸುವರು, ದೇವಸ್ಥಾನದಲ್ಲಿ ಪ್ರಸಾದದ ವ್ಯವಸ್ಥೆಯನ್ನು ಕೂಡಮಾಡಲಾಗಿದೆಂದು ಆರ್.ಜಿ.ಕಲಾ ಟ್ರಸ್ಟ್ ಕರೋಕೆ ಸ್ಟುಡಿಯೋ ಅಧ್ಯಕ್ಷ ವೀರೇಶ ದೇವರಮನಿ ತಿಳಿಸಿದರು.

ಈ ವೇಳೆ ಮಾತನಾಡಿದ ಅರ್ಚಕ ಮಹೇಶ ತಾತನವರು ವರುಣನ ಆಗಮನಕ್ಕೆ ಸಪ್ತಭಜನೆ ಶ್ರಾವಣ ಮಾಸದಲ್ಲಿ ಸಂಪ್ರದಾಯವಾಗಿದೆ ಎಂದು ಅಭಿಪ್ರಾಯ ಪಟ್ಟರು. ತಿಮ್ಮಾಪುರ ಗ್ರಾಮದ ಗುರು ಹಿರಿಯರು ಸಮಸ್ತ ಭಕ್ತ ಬಳಗದವರು ಭಾಗಿಯಾಗಿದ್ದರು. ತಿಮ್ಮಾಪುರ ಗ್ರಾಮಸ್ಥ–ರಿಂದ ಮಳೆರಾಯನ ಕೃಪೆಗಾಗಿ ಸಪ್ತಭಜನೆ ಮುಂಗಾರು ಮಳೆ ಬಾರದ ಹಿನ್ನೆಲೆ ರೈತರಲ್ಲಿ ಆತಂಕ ಮನೆ ಮಾಡಿದ್ದು, ಮಳೆಯಿಲ್ಲದೆ ಬೆಳೆ ಇಲ್ಲ ಬೆಳೆ ಇಲ್ಲದೆ ರೈತರ ಜೀವನ ಇಲ್ಲ, ಗ್ರಾಮೀಣ ಪ್ರದೇಶಗಳಲ್ಲಿ ಮಳೆ ಆಧಾರಿತ ಬೆಳೆ ಬೆಳೆಯುವ ರೈತ ಜನಾಂಗಕ್ಕೆ ವರುಣ ಕೃಪೆ ತೋರಲೆಂದು ಆ.24 ಸೋಮವಾರ ಬೆಳಗಿನ ಜಾವ 6 ಗಂಟೆಯಿಂದ ಮುಂದಿನ ಶನಿವಾರ ಬೆಳಿಗ್ಗೆ 8 ಗಂಟೆವರೆಗೂ ತಾಲೂಕಿನ ಸುಕ್ಷೇತ್ರ ತಿಮ್ಮಾಪುರ ಗ್ರಾಮದ ಶ್ರೀಅವಧೂತ ಅಯ್ಯಪ್ಪ ತಾತನವರ ದೇವಸ್ಥಾನದಲ್ಲಿ ಮಹಾಲಕ್ಷ್ಮಿ ಸಿದ್ದಯ್ಯಸ್ವಾಮಿಯವರ ಕಳಸದೊಂದಿಗೆ 7 ಜನ ಸೇರಿ, 7 ಪಾಳೇಗಳನ್ನು ಮಾಡಿ, 24ಗಂಟೆಗಳ ಕಾಲ ಬಾವಿ ನೀರು ಸ್ನಾನ ಮಾಡಿ ಸಪ್ತ ಭಜನೆ ಮಾಡಿದರು.

ವೀರೇಶ ತಂದೆ ರುದ್ರಪ್ಪ ಪಲ್ಯದ ಇವರು ಗ್ರಾಮದ ಅಗಸಿಯೊಳಗಿನ ಬಾವಿಯಿಂದ 101 ಕೊಡದ ನೀರು ತಂದು, ತಾತನವರ ಕತ್ರು ಗದ್ದುಗೆಗೆ ಹಾಕುವ ಮೂಲಕ ವರುಣನಿಗೆ ಸ್ವಾಗತ ಬಯಸುವರು, ದೇವಸ್ಥಾನದಲ್ಲಿ ಪ್ರಸಾದದ ವ್ಯವಸ್ಥೆಯನ್ನು ಕೂಡಮಾಡಲಾಗಿದೆಂದು ಆರ್.ಜಿ.ಕಲಾ ಟ್ರಸ್ಟ್ ಕರೋಕೆ ಸ್ಟುಡಿಯೋ ಅಧ್ಯಕ್ಷ ವೀರೇಶ ದೇವರಮನಿ ತಿಳಿಸಿದರು.

ಈ ವೇಳೆ ಮಾತನಾಡಿದ ಅರ್ಚಕ ಮಹೇಶ ತಾತನವರು ವರುಣನ ಆಗಮನಕ್ಕೆ ಸಪ್ತಭಜನೆ ಶ್ರಾವಣ ಮಾಸದಲ್ಲಿ ಸಂಪ್ರದಾಯವಾಗಿದೆ ಎಂದು ಅಭಿಪ್ರಾಯ ಪಟ್ಟರು. ತಿಮ್ಮಾಪುರ ಗ್ರಾಮದ ಗುರು ಹಿರಿಯರು ಸಮಸ್ತ ಭಕ್ತ ಬಳಗದವರು ಭಾಗಿಯಾಗಿದ್ದರು.

# “ಅಮೋಘ” ಚಲನಚಿತ್ರದ ಹಾಡು ಬಿಡುಗಡೆ

❏ ನೈಜ್ಯ ದೇಸೆ ನ್ಯೂಸ್



ಮೈಸೂರು: ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿನ “ಶ್ರೀ ಆರ್ಟ್ ಇವೆಂಟ್ಸ್ ಮ್ಯಾನೇಜ್‌ಮೆಂಟ್” ಅವರ “ಶ್ರೀ ಆರ್ಟ್ ಫಿಲಿಂಸ್” ವತಿಯಿಂದ ಗಡಿನಾಡಹುಲಿ ಫಿಲ್ಮ್ ಬ್ಯಾನರಿನಲ್ಲಿ ‘ಅಮೋಘ’ ಹೊಸ ಕನ್ನಡ ಚಲನಚಿತ್ರದ ‘ಹೊತ್ತಳು ನನ್ನ ಭಾರ’ ತಾಯಿ ಕುರಿತಾದ ಹಾಡು ಬಿಡುಗಡೆ ಮಾಡಲಾಯಿತು .

ಮೈಸೂರು, ಬೆಂಗಳೂರು ಮಡಿಕೇರಿ ಮತ್ತು ಮಂಗಳೂರು ಸುತ್ತಮುತ್ತ ಚಲನಚಿತ್ರದ ಚಿತ್ರೀಕರಣ ನಡೆಸಲಾಗಿದ್ದು , ನಾಲ್ಕು ಹಾಡುಗಳು , ಒಂದು ಸಾಹಸ ದೃಶ್ಯ ಕೂಡ ಚಿತ್ರದಲ್ಲಿದೆ. ಗಡಿನಾಡಹುಲಿ ಪುನೀತ್ ಕುಮಾರ್ ಕೆ. ಎನ್ ನಿರ್ದೇಶಿಸಿ, ನಿರ್ಮಾಣದಲ್ಲಿ ಲಿಖಿತಕುಮಾರ್ ಶ್ರೀಧರ್ ಪ್ರಸ್ತುತಪಡಿಸಿದ ‘ಹೊತ್ತಳು ನನ್ನ ಭಾರ’ ಇದೀಗ ಎಲ್ಲಡೆ ಮೆಚ್ಚುಗೆ ಗಳಿಸಿದೆ. ತಾರಾಗಣದಲ್ಲಿ ಮಿಶೆಲ್ ಸಕ್ವೇರಾ, ಗಡಿನಾಡಹುಲಿ ಪುನಿತ ಕುಮಾರ, ಕೆ.ಎನ್.ರೇಷ್ಮಾ , ಪ್ರತಿಭಾ ಶೆಟ್ಟಿ, ಈಶ್ವರ ಶೆಟ್ಟಿ, ಸಂತೋಷ ಗೋಪಾಲ ರೆಡ್ಡಿ, ಧನುಷ್ ಎಸ್.ಕೆ.ಮೈಸೂರ, ಕಲ್ಕಿ, ಮಾಸ್ಟರ್ ಪ್ರೀತಮ್, ಮಾಸ್ಟರ್ ಲಿಶಾಶ್ರೀ, ಶ್ರೀನಿವಾಸ ಮೂರ್ತಿ, ಶ್ವೇತ ಲಿಖಿತ್ ಮೊದಲಾದವರಿದ್ದಾರೆ.

ಶ್ರೀ ಹರ್ಷ ಶ್ರೀಧರ್(ಆಕಾಶ) ಛಾಯಾಗ್ರಹಣದ ಜೊತೆಗೆ ಸಂಕಲನವಿದೆ , ಧನುಷ್ ಡಿ.ಕೆ.ಎಸ್ ಸಂಗೀತ ಸಂಂ–ಯೋಜನೆ , ಭವತಾರಣಿ ಕೆ.ಎನ್ ಹಿನ್ನೆಲೆಗಾಯಕರಾಗಿದ್ದಾರೆ. ಎಸ್ ಎಫ್ ಎಕ್ಸ್ ಮನುರೈ, ರೆಕಾರ್ಡಿಂಗ್ ಮತ್ತು ಮಾಸ್ಟರಿಂಗ್ ಎಂ ರಾವ್ ಸ್ಟುಡಿಯೋ ಮೈಸೂರು, ಕಲಾನಿರ್ದೇಶನ ಚಂದನಕುಮಾರ್, ಪಿಆರ್ ಓ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ, ಸಹ ನಿರ್ದೇಶನ ವಸಂತಕುಮಾರ ಎಸ್.ಎನ್ ಅವರದಿದೆ,ಅತ್ಯಂತ ಭಾವಪೂರ್ಣವಾದ ತಾಯಿಯ ಬಲಿದಾನ ಮತ್ತು ತ್ಯಾಗವನ್ನು ಬಿಂಬಿಸುವ ಈ ಹಾಡನ್ನು “ಶ್ರೀ ಆರ್ಟ್ ಫಿಲಿಂಸ್” ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆ ಮಾಡಲಾಗಿದ್ದು ವೀಕ್ಷಕರು ವೀಕ್ಷಿಸಿ ಚಿತ್ರತಂಡವನ್ನು ಪ್ರೋತ್ಸಾಹಿಸಬೇಕು ಎಂದಿದ್ದಾರೆ. ಡಾ.ಪ್ರಭು ಗಂಜಿಹಾಳ

# ತೆಕ್ಕಲಕೋಟೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಒಕ್ಕೂಟ ಪದಾಧಿಕಾರಿಗಳ ತರಬೇತಿ ಕಾರ್ಯಾಗಾರ ಯಶಸ್ವಿ

❏ ನೈಜ್ಯ ದೇಸೆ ನ್ಯೂಸ್



ತೆಕ್ಕಲಕೋಟೆ: ಪಟ್ಟಣದ ಶ್ರೀ ಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಸೋಮವಾರದಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ (ರಿ) ವತಿಯಿಂದ ತೆಕ್ಕಲಕೋಟೆ ವಲಯದ ಒಕ್ಕೂಟ ಪದಾಧಿಕಾ–ರಿಗಳ ತರಬೇತಿ ಕಾರ್ಯಗಾರವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಳ್ಳಾರಿ ಜಿಲ್ಲಾ ನಿರ್ದೇಶಕ ರೋಹಿತಾಕ್ಷ ಕಾರ್ಯಗಾರವನ್ನು ಉದ್ಘಾಟನೆ ಮಾಡಿ ಮಾತನಾಡಿದ ಅವರು ಶ್ರೀ ಕ್ಷೇತ್ರ ಧರ್ಮಸ್ಥಳದ ಹಿನ್ನೆಲೆ, ನಮ್ಮೂರು ನಮ್ಮ ಕೆರೆ, ಶುದ್ಧಗಂಗಾ ಘಟಕ, ಜನಮಂಗಲ ಕಾರ್ಯಕ್ರಮ, ಸುಜ್ಞಾನನಿಧಿ ಶಿಷ್ಯವೇತನ,, ಜನಜಾಗೃತಿ ಕಾರ್ಯಕ್ರಮಗಳು, ಕ್ಷೇತ್ರದ ಸಮಾಜಮುಖಿ ಇತರ ಕಾರ್ಯಗಳ ಬಗ್ಗೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸೇವಾ ಕಾರ್ಯಕ್ರಮಗಳ ಬಗ್ಗೆ ಪದಾಧಿಕಾ–ರಿಗಳಿಗೆ ಮಾಹಿತಿ ನೀಡಿದರು.

ತಾಲೂಕು ಕ್ಷೇತ್ರ ಯೋಜನಾಧಿಕಾರಿ ವಸಂತ್ ಎಸ್ ರವರು ಪದಾಧಿಕಾರಿಗಳಿಗೆ ಒಕ್ಕೂಟಗಳ ಮಹತ್ವ, ಒಕ್ಕೂಟ ಪದಾಧಿಕಾರಿಗಳ ಜವಾಬ್ದಾರಿ, ಒಕ್ಕೂಟ ಸಭೆ 3 ತಿಂಗಳಿಗೊಮ್ಮೆ ನಡೆಸುವ ಕುರಿತು,ಯೋಜನೆಯ ಕಾರ್ಯಕ್ರಮಗಳಿಗೆ ಸಹಕಾರ ನೀಡುವ ಕುರಿತು ಮಾತನಾಡಿದರು.

ತರಬೇತಿಯಲ್ಲಿ ತಾಲೂಕು ವಿಚಕ್ಷಣಾಧಿಕಾರಿ ರಾಕೇಶ ಸ್ವ ಸಹಾಯ ಸಂಘಗಳ ಆರ್ಥಿಕ ಶಿಸ್ತಿನ ಬಗ್ಗೆ, ಬಡ್ಡಿದರದ ಬಗ್ಗೆ, ಸಿಬಿಲ್ ವ್ಯವಸ್ಥೆ ಬಗ್ಗೆ, ಪ್ರಗತಿನಿಧಿ ಕಾರ್ಯಕ್ರಮಗಳ ಬಗ್ಗೆ, ಬ್ಯಾಂಕ್ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭ ವಲಯದ ಮೇಲ್ವಿಚಾರಕಿ ನಾಗವೇಣಿ, ಒಕ್ಕೂಟದ ಅಧ್ಯಕ್ಷರಾದ ರುಕ್ಸಾನಾ, ವೆಂಕಟೇಶ, ರಾಮಾಂಜನೇಯ ಹಾಗೂ ಸೇವಾಪ್ರತಿನಿಧಿಗಳಾದ ಫ–ರಿದಾ ಬಾನು, ರಶೀದಾ, ಶಕುಂತಲಾ, ಹೇಮಾವತಿ ಮತ್ತು ಒಕ್ಕೂಟ ಪದಾಧಿಕಾರಿಗಳು ಉಪಸ್ಥಿತರಿದ್ದರು.
ವರದಿ:ಮಸೀದಿ,ಅಬ್ದುಲ್‌ಗೌಸ್,ಸಿರುಗುಪ್ಪ

# ಕೆ.ಎಲ್.ಇ ಸಂಸ್ಥೆಯಲ್ಲಿ ಎರಡು ದಿನಗಳ ಕಲಾ ಶಿಕ್ಷಣ ತರಬೇತಿ

❏ ನೈಜ್ಯ ದೇಸೆ ನ್ಯೂಸ್




ನಿಪ್ಪಾಣಿ: ಕಲಾ ಶಿಕ್ಷಣದ ಮಹತ್ವ, ಸೃಜನಶೀಲತೆ, ಕಲ್ಪನೆ, ಆಲೋಚನೆ, ಅಭಿವ್ಯಕ್ತಿ ಹಾಗೂ ನಾವಿನ್ಯತೆಯನ್ನು ಇಂದಿನ ವಿದ್ಯಾರ್ಥಿಗಳು ತಿಳಿದುಕೊಳ್ಳುವ ಅಗತ್ಯವಿದೆ ಎಂದು ಕೆ.ಎಲ್.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಬಿ.ಬಿ. ಪೊಲೀಸ್‌ಪಾಟೀಲ ಹೇಳಿದರು.

ಸೋಮವಾರ ಇಲ್ಲಿನ ಕೆ.ಎಲ್.ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂಡಿಂ–ಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್‌ನ ‘ಕಲಿಕಲಿಸು’ ಯೋಜನೆಯಡಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಎರಡು ದಿನಗಳ ‘ಕಲಾ ಅಂತರ್ಗತ ಕಲಿಕೆ’ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬೋಧನಾ ಪ್ರಕ್ರಿಯೆಯಲ್ಲಿ ನಾವಿನ್ಯತೆ ಹಾಗೂ ಕಲಾ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ವಿದ್ಯಾರ್ಥಿಗಳಲ್ಲಿ ಸೃಜನಶೀಲ ಚಿಂತನೆ ಬೆಳೆಸಬಹುದು ಎಂದರು. ಬೆಂಗಳೂರಿನ ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್‌ನ ಕಾರ್ಯಕ್ರಮ ಸಂಯೋಜಕ ದೀಪಕ್ ಡಿ.ಎಚ್. ಮಾತನಾಡಿ, ಸಂಸ್ಥೆಯ ‘ಕಲಿಕಲಿಸು’ ವಿಭಾಗವು ಮೂರು ದಶಕಗಳಿಂದ ಸರ್ಕಾರಿ ಶಾಲೆಗಳು ಹಾಗೂ ಶಿಕ್ಷಕರ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಕಲಾ ಶಿಕ್ಷಣವು ಕಲಿಕೆಗೆ ಪರಿಣಾಮಕಾರಿ ಮಾಧ್ಯಮವಾಗಿದ್ದು, ಕಥೆ, ಹಾಡು, ನಾಟಕ, ಚಿತ್ರಕಲೆ ಸೇರಿದಂತೆ ಸ್ಥಳೀಯ ಕಲಾ ಪ್ರಕಾರಗಳ ಮೂಲಕ ಶಾಲಾ ಕೊಠಡಿಯ ಕಲಿಕೆಯನ್ನು ಹೊರಜಗತ್ತಿನೊಂದಿಗೆ ಬೆಸೆಯಲು ಸಾಧ್ಯ ಎಂದರು. ಉಪನ್ಯಾಸಕ ರಾಜಶೇಖರಮೂರ್ತಿ ಕೆ.ವಿ. ‘ರಂಗಾಂತರ್ಗತ ಕಲಿಕೆ’ ಕುರಿತು ಮಾತನಾಡಿ, ಪಾತ್ರಾಭಿನಯ, ಸಂಭಾಷಣೆ ಹಾಗೂ ವೇದಿಕೆ ಪ್ರದರ್ಶನದ ಮೂಲಕ ವಿದ್ಯಾರ್ಥಿಗಳ ಮಾತುಗಾ–ರಿಕೆ, ಅಭಿವ್ಯಕ್ತಿ, ಸಹಕಾರ, ನಾಯಕತ್ವ ಮತ್ತು ಸೃಜನಶೀಲ ಕೌಶಲಗಳು ವೃದ್ಧಿಯಾಗುತ್ತವೆ ಎಂದರು. ಕೊಪ್ಪಳದ ಕಿಶನರಾವ್ ಕುಲಕರ್ಣಿ ‘ಸಾಹಿತ್ಯದಲ್ಲಿ ಜನಪದ’ ವಿಷಯವಾಗಿ ಮಾತನಾಡಿ, ಜನಪದ ಕಥೆ, ಹಾಡು, ಗಾದೆ, ಒಗಟು ಹಾಗೂ ಲಾವಣಿಗಳ ಮೂಲಕ ವಿದ್ಯಾರ್ಥಿಗಳಿಗೆ ನಾಡಿನ ಸಂಸ್ಕೃತಿ, ಆಚರಣೆ, ಜೀವನಶೈಲಿ ಮತ್ತು ಪರಂಪರೆಯ ಅರಿವು ಮೂಡಿಸಬಹುದು ಎಂದರು.

ವಿಜಯನಗರದ ಕೊಟ್ರೇಶ ಬಿ. ಅವರು ‘ಸೃಜನಶೀಲ ಬರವಣಿಗೆ’ ಕುರಿತು ಮಾತನಾಡಿ, ವಿದ್ಯಾರ್ಥಿಗಳು ತಮ್ಮದೇ ಆದ ಆಲೋಚನೆ ಮತ್ತು ಕಲ್ಪನೆಗಳನ್ನು ಬಳಸಿಕೊಂಡು ಹೊಸ ವಿಧಾನಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸೃಜನಶೀಲ ಕಲಿಕೆ ಸಹಕಾರಿಯಾಗಿದೆ ಎಂದರು. ಸಂಪನ್ಮೂಲ ವ್ಯಕ್ತಿ ಅಪರ್ಣಾ ದೇಶಪಾಂಡೆ ‘ಕಲಿಕೆಯ ಹಿಂದಿರುವ ಭಾಷೆ’ ಕುರಿತು ಮಾಹಿತಿ ನೀಡಿದರು. ರಾಜ್ಯ ಜನಪದ ಅಕಾಡೆಮಿ ಸದಸ್ಯ ಶಂಕ್ರಣ್ಣ ಸಂಕಣ್ಣವರ ಜನಪದ ಗೀತೆಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಎಂ.ಕೆ. ಹಂಚಿನಾಳ, ಡಾ. ಪಿ.ಎಸ್. ಉಪಾಧ್ಯೆ, ಎಂ.ಎ. ಮಹಾಜನ, ಪಿ.ಆರ್. ಖೋತ್, ಜೆ.ಬಿ. ಬಡಚಿ, ಎಸ್.ಎಂ. ಪಾಟೀಲ ಹಾಗೂ ಕೆ.ಬಿ. ಗಿರಿಮಲ್ಲನವರ ಉಪಸ್ಥಿತರಿದ್ದರು. ತರಬೇತಿಯಲ್ಲಿ 83 ಬಿ.ಎಡ್. ವಿದ್ಯಾರ್ಥಿಗಳು ಗುಂಪು ಚಟುವಟಿಕೆ ಹಾಗೂ ಚರ್ಚೆಗಳಲ್ಲಿ ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅಶ್ವಿನಿ ನಿಂಗನೂರ ಕಾರ್ಯಕ್ರಮ ನಿರೂಪಿಸಿದರು. ಖುತುಜಾ ಜಂಬಗಿ ಸ್ವಾಗತಿಸಿದರು. ಸುಪ್ರಿತಾ ಕೊಟಬಾಗಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು

# ಸಾಹಿತ್ಯ ಸಿಂಚನ

## ನಮ್ಮ ಸುಂದರ ಭೂಮಿ

ನೀಲಿ ಆಕಾಶದ ವಿಶಾಲ ಹೊದಿಕೆ,
ಹಸಿರು ಭೂಮಿಯ ಸುಂದರ ಅಲಂಕಾರ?
ಬೆಟ್ಟ-ಗುಡ್ಡಗಳ ಮನಮೋಹಕ ನೋಟ,
ಪ್ರಕೃತಿಯೇ ನೀಡಿದ ಅಮೂಲ್ಯ ಉಡುಗೊರೆ?

ಕಲಕಲ ಹರಿಯುವ ನದಿಯ ನೀರು,
ಹಾಡುತ್ತ ಹಾರುವ ಹಕ್ಕಿಗಳ ಗೀತೆ?
ಬಣ್ಣ ಬಣ್ಣದ ಹೂಗಳ ನಗು,
ನೋಡುವ ಮನದಲ್ಲಿ ಮೂಡುವ ಹರ್ಷವೇ ತುಂಬು

ಸೂರ್ಯೋದಯದ ಚಿನ್ನದ ಕಿರಣ,
ಸಂಜೆಯ ಹೊತ್ತಿನ ಕೆಂಪು ಬಾನ?
ಚಂದಿರನ ಬೆಳಕಿನ ತಂಪಾದ ರಾತ್ರಿ,
ನಮ್ಮ ಭೂಮಿಯ ಸೌಂದರ್ಯ ಎಷ್ಟು ಅದ್ಭುತ!

ಮರವೇ ನಮ್ಮ ಉಸಿರಿನ ಗೆಳೆಯ,
ನೀರೆ ನಮ್ಮ ಜೀವನದ ಆಶ್ರಯ?
ಪ್ರಕೃತಿಯನ್ನು ಪ್ರೀತಿಯಿಂದ ಕಾಪಾಡಿದರೆ,
ಭೂಮಿ ಸದಾ ನಗುತ್ತಿರುತ್ತದೆ ನಮ್ಮೊಂದಿಗೆ?

ನಮ್ಮ ಭೂಮಿ ನಮ್ಮ ತಾಯಿ,
ಅವಳ ಮಡಿಲೇ ನಮ್ಮ ನೆಲೆ?
ಸುಂದರ ಭೂಮಿಯನ್ನು ರಕ್ಷಿಸೋಣ,
ಮುಂದಿನ ಪೀಳಿಗೆಗೆ ಉಳಿಸೋಣ!

# ವಿರೂಪಾಪುರ ಶಾಲೆಯಲ್ಲಿ 'ಸಾಂಕ್ರಾಮಿಕ ರೋಗಗಳ ಜಾಗೃತಿ' ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಜ್ ರಾಯಚೂರ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಮಲಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರ ಇವರ ಸಂಯುಕ್ತಾಶ್ರಯದಲ್ಲಿ ಸಿಂಧನೂರು ಆಗಸ್ಟ್ – 24 , "ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿವಹಿಸಿ" ವಿರುಪಪುರ್ ಆಯುಷ್ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ವಿರುಪಾಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲೆ ವಿರೂಪಾಪುರ್ ಸಾಂಕ್ರಾಮಿಕ ರೋಗಗಳ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಶ್ರೀಮತಿ ಗೀತಾ ಹಿರೇಮಠ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರು ಇವರು ಮಕ್ಕಳನ್ನು ಉದ್ದೇಶಿಸಿ ಮಾತನಾಡುತ್ತ ವಿದ್ಯಾರ್ಥಿಗಳಲ್ಲಿ ಸಾಂಕ್ರಾಮಿಕ ರೋಗಗಳ ಕುರಿತು ವಾತಾವರಣದಲ್ಲಿ



ಬದಲಾವಣೆಯಾದ ಕಾರಣ ಜ್ವರ, ಶೀತ ಕೆಮ್ಮು ಸಾಮಾನ್ಯವಾಗಿ ಕಂಡುಬರುತ್ತವೆ ಹಾಗಾಗಿ ನಿಯಮಿತವಾಗಿ ರಕ್ತದ ಪರೀಕ್ಷೆ ಮಾಡಿಸಬೇಕು, ಪೌಷ್ಟಿಕ ಆಹಾರ ಸೇವನೆ ಮಾಡಬೇಕು ಎಂದು ತಿಸಲಾಯಿತು ಕ್ಷಯರೋಗದ ಲಕ್ಷಣಗಳ, ಕುಷ್ಟರೋಗದ, ತಂಬಾಕು ಸೇವನೆ ಅಥ–ವಾ ಮಾದಕ ವಸ್ತುಗಳಂತ ದುಶ್ಚಟಗಳಿಂದ ದೂರವಿರಬೇಕು, ಆನೆ ಕಾಲು ರೋಗದ ನಿರ್ವಹಣೆ, ರಕ್ತಹಿನತೆ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಲಾಯಿತು ತದನಂತರ ವಿರೂಪಾಪುರ್ ಗ್ರಾಮದಲ್ಲಿ ಗಂಡಾಂತರ ಗರ್ಭಿಣಿಯರ ಮನೆ ಬೇಟಿ ಮಾಡಿ ವಾತಾವರಣದಲ್ಲಿ ಬದಲಾವಣೆಯಾದ ಕಾರಣ ಸಾಂಕ್ರಾಮಿಕ ರೋಗಗಳ ಹಾಗರ ಹೆಚ್ಚಾದಂತೆ ಸಾರ್ವಜನಿಕರಲ್ಲಿ ಸಾಮಾನ್ಯವಾಗಿ ಜ್ವರ ನೆಗಡಿ ಕೆಮ್ಮು ಬೇರೆ ಬೇರೆ ಕಾಯಿಲೆ ಬರುವ ಸಂಭವ ಹೆಚ್ಚಾಗಿರುವುದರಿಂದ ಮುನ್ನಚ್ಚರಿಕೆ ಕ್ರಮಗಳನ್ನ ವಹಿಸಬೇಕು ಮಳೆ ಪ್ರಾರಂಭವಾದ ಹಿನ್ನೆಲೆ ಬಿಸಿಯಾದ ಆಹಾರ ಸೇವನೆ ಕಾಯಿಸಿ ಆರಿಸಿ ಸೋಸಿ ನೀರನ್ನು ಸೇವಿಸುವುದು.

ಬೀದಿಬದೆಯ ಆಹಾರಗಳನ್ನು ಸೇವನೆ ಕಡಿಮೆ ಮಾಡಬೇಕು ಕತ್ತರಿಸಿ ಇಟ್ಟ ಹಣ್ಣುಗಳನ್ನು ಸೇವನೆ ಮಾಡುವುದು ಕಡಿಮೆ ಮಾಡಬೇಕು ವಯಕ್ತಿಕ ಸ್ವಚ್ಛತೆಯ ಗಮನವಹಿಸಬೇಕು,. ಗರ್ಭಿಣಿಯರಲ್ಲಿ ಜ್ವರದ ಲಕ್ಷಣಗಳು ಕಂಡಾಗ ಅಥವಾ ಯಾವುದೇ ಜ್ವರ, ಡೆಂಗ್ಯೂ ಜ್ವರ ಬಂದಾಗ ತೀವ್ರತರ ಜ್ವರ ಮೈ ಕೈ ನೋವು ಹಾಗೂ ಸುಸ್ತು ಕಾಣಿಸಿಕೊಳ್ಳುತ್ತದೆ ಇದು ತಾಯಿ ಹಾಗೂ ಮಗುವಿನ ಮೇಲೆ ಪರಿಣಾಮ ಬೀರಬಹುದು ತಕ್ಷಣ ವೈದ್ಯರ ಬಳಿ ರಕ್ತ ಪರೀಕ್ಷೆ ಮಾಡಿಸಬೇಕು ಪ್ಯಾರಾಸಿಟಮಾಲ್ ಹೊರತುಪಡಿಸಿ ಇತರೆ ನೋವು ನಿವಾರಕಗಳನ್ನು ವೈದ್ಯರ ಸಲಹೆ ಇಲ್ಲದೆ ತೆಗೆದುಕೊಳ್ಳಬಾರದು ತೀವ್ರವಾದ ಜ್ವರ ತಲೆನೋವು ಹಾಗೂ ಕಣ್ಣುಗಳ ಹಿಂದೆ ನೋವು ವಿಪರೀತ ಕೀಲು ಮತ್ತು ಸ್ನಾಯುಗಳ ನೋವು ಚರ್ಮದ ಮೇಲೆ ಗುಳ್ಳೆಗಳು ಅಥವಾ ದಡಾರ,

ಹೊಟ್ಟೆ ನೋವು, ವಾಂತಿ ಅಥ–ವಾ ಸುಸ್ತು ವಸಡುಗಳಿಂದ ರಕ್ತಸ್ರಾವ ವೈದ್ಯರ ಮೇಲ್ವಿಚಾರಣೆಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದು ರಕ್ತದೊತ್ತಡದ ನಿರಂತರ ತಪಾಸಣೆ, ಜ್ವರಕ್ಕೆ ಕೇವಲ ಪ್ಯಾರಸೀಟಮಾಲಾ ಬಳಸುವುದು ಮುನ್ನೆಚ್ಚ–ರಿಕೆ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ.

# ಜಾಲಹಳ್ಳಿ ವಾರ್ಡ್ 1ರಲ್ಲಿ ಸಮಯಕ್ಕೆ ತೆರೆಯದ ಅಂಗನವಾಡಿ ಕೇಂದ್ರ–01: ಮಕ್ಕಳ ಪರದಾಟ, ಪಾಲಕರ ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಜಾಲಹಳ್ಳಿ ಪಟ್ಟಣದ ವಾರ್ಡ್–1ರ ಅಂಗನವಾಡಿ ಕೇಂದ್ರ–01ರಲ್ಲಿ ಸಿಬ್ಬಂದಿಯ ನಿರ್ಲಕ್ಷ್ಯದ ಆರೋಪ ಕೇಳಿಬಂದಿದ್ದು, ಬೆಳಿಗ್ಗೆ 11 ಗಂಟೆಯಾದರೂ ಕೇಂದ್ರದ ಬಾಗಿಲು ತೆರೆಯದೆ ಮಕ್ಕಳು ಹೊರಗಡೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಲಿಂಗಣ್ಣ ಮಕಾಸಿ ಆರೋಪಿಸಿದ್ದಾರೆ.

ಬೆಳಗ್ಗೆಯೇ ಅಂಗನವಾಡಿ ಕೇಂದ್ರಕ್ಕೆ ಆಗಮಿಸುವ ಪುಟ್ಟ ಮಕ್ಕಳು ಬಾಗಿಲು ತೆರೆಯದೆ ಇರುವುದರಿಂದ ಹೊರಗಡೆ ಕಾದು ಕುಳಿತು, ಕೊನೆಗೆ ಅನಿವಾರ್ಯವಾಗಿ ಮನೆಗೆ ವಾಪಸ್ ತೆರಳುವಂತಾಗಿದೆ. ಇದ–ರಿಂದ ಮಕ್ಕಳ ಶಿಕ್ಷಣ, ಆರೈಕೆ ಹಾಗೂ ಪೌಷ್ಟಿಕ ಆಹಾರ ವಿತರಣೆಗೆ ತೊಂದರೆಯಾಗುತ್ತಿದೆ

**ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿ**
**ಈ ಕುರಿತು ತಾಲೂಕು ಸಿಡಿಪಿಒ ಅಧಿಕಾರಿ ಮಹೇಶ್ ಊರುಕುಂದಪ್ಪ ಮಾತನಾಡಿ, ಅಂಗನವಾಡಿ ಕೇಂದ್ರ–01ರಲ್ಲಿ ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿಯಿದ್ದು, ಪ್ರಸ್ತುತ ಅಂಗನವಾಡಿ ಸಹಾಯಕಿಂ–ಯ ಮೂಲಕ ಕೇಂದ್ರವನ್ನು ನಡೆಸಲಾಗುತ್ತಿದೆ. ಶೀಘ್ರದಲ್ಲೇ ಸ್ಥಳಕೆ ಭೇಟಿ ನೀಡಿ ಸೂಕ್ತ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.**

ಎಂದು ಪಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ನೀಡಬೇಕಾದ ಪೌಷ್ಟಿಕ ಆಹಾರ ಹಾಗೂ ಬಿಸಿಯೂಟವನ್ನು ನಿಯಮಾನುಸಾರ ಸಿದ್ಧಪಡಿಸುತ್ತಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ಸರ್ಕಾರದ ಯೋಜನೆಗಳ ಸೌಲಭ್ಯಗಳು ಅರ್ಹ ಮಕ್ಕಳಿಗೆ ಸಮರ್ಪಕವಾಗಿ ತಲುಪುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಕೇಂದ್ರವು ನಿಗದಿತ ಸಮಯಕ್ಕೆ





ತೆರೆಯುವಂತೆ ಕ್ರಮ ಕೈಗೊಂಡು, ಮಕ್ಕಳಿಗೆ ಪೌಷ್ಟಿಕ ಆಹಾರ ಸೇರಿದಂತೆ ಸರ್ಕಾರದ ಎಲ್ಲ ಸೌಲಭ್ಯಗಳು ಸಮರ್ಪಕವಾಗಿ ದೊರೆಯುವಂತೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಪಾಲಕರು ಹಾಗೂ ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಅಶ್ವಿನಿ ಅತ್ಯಾಚಾರ–ಕೊಲೆ ಪ್ರಕರಣ: ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಬಿಜೆಪಿ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ದಲಿತ ಯುವತಿ ಅಶ್ವಿನಿ ಅವರ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಪ್ರಕರಣವನ್ನು ಖಂಡಿಸಿ, ಬಿಜೆಪಿ ಕಂಪ್ಲಿ ಮಂಡಲ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಿ.ಎ ಚನ್ನಪ್ಪ ನೇತೃತ್ವದಲ್ಲಿ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.





ಬಯಲು ಶೌಚಾಲಯಕ್ಕೆ ತೆರಳಿದ್ದ ಯುವತಿಯನ್ನು ಅಪಹರಿಸಿ ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಆರೋಪಿಗಳಿಗೆ ತಕ್ಷಣ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು. ಮಹಿಳೆಯರು ಹಾಗೂ ದಲಿತರ ಸುರಕ್ಷತೆಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು. ಪ್ರಕರಣವನ್ನು ಫಾಸ್ಟ್‌ಟ್ರ್ಯಾಕ್ ನ್ಯಾಯಾಲಯಕ್ಕೆ ವಹಿಸಬೇಕು, ರಾಯಚೂರು ಜಿಲ್ಲೆಯನ್ನು 'ಅತಿಸೂಕ್ಷ್ಮ ಜಿಲ್ಲೆ' ಎಂದು ಘೋಷಿಸಬೇಕು, ಪ್ರತಿ ಗ್ರಾಮದಲ್ಲಿ ಸಿಸಿ ಕ್ಯಾಮೆರಾ ಹಾಗೂ ಬೀದಿ ದೀಪಗಳ ವ್ಯವಸ್ಥೆ ಕಲ್ಪಿಸಬೇಕು ಮತ್ತು ಪ್ರತಿ ಮನೆಗೂ ಶೌಚಾಲಯ ನಿರ್ಮಿಸಬೇಕು ಎಂಬ ಬೇಡಿಕೆಗಳನ್ನು ಮುಂದಿಡಲಾಯಿತು. ಈ ಸಂದರ್ಭದಲ್ಲಿ ಬಿಜೆಪಿಯ ಶ್ರೀನಿವಾಸ್, ಪ್ರಶಾಂತ್, ಮುರಳಿ ಮೋಹನ್, ಮಂಜುಳಾ, ಕಟ್ಟೆ ವಿಶ್ವನಾಥ್, ರಾಮಾಂಜಿನೇಯಲು, ಬಸವಪ್ರಭು ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

# ಎರಡು ದಿನಕ್ಕೊಮ್ಮೆ ನೀರು ಪೂರೈಸಿ ಹಾಗೂ ಅತಿಕ್ರಮಣ ಜಾಗೆ ತೆರವುಗೊಳಿಸುವಂತೆ : ಕರವೇ ಆಂಜನೇಯ ಭಂಡಾರಿ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಪಟ್ಟಣದಲ್ಲಿ 2 ದಿನಕ್ಕೆ ಒಂದು ಬಾರಿ ಕುಡಿಯುವ ನೀರಿನ ಸರಬರಾಜು ಮಾಡಬೇಕು ಹಾಗೂ ಅತಿಕ್ರಮಣ ಜಾಗೆಯನ್ನು ತೆರವುಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಕುಮಾರ್ ಶೆಟ್ಟಿ ಬಣ)ದ ತಾಲೂಕು ಅಧ್ಯಕ್ಷ ಆಂಜನೇಯ ಭಂಡಾರಿ ಪುರಸಭೆ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಿದರು.**

ಪಟ್ಟಣದ ಮನೆಗಳಿಗೆ ಐದು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿರುವುದ–ರಿಂದ ಸಾರ್ವಜನಿಕರು ಅನಿವಾರ್ಯವಾಗಿ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಬೇಕಾಗಿದೆ. ಹಲವು ದಿನಗಳ ಕಾಲ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದ–ರಿಂದ ನೀರಿನ ಶುದ್ಧತೆ ಹದಗೆಟ್ಟು, ಹುಳುಗಳು ಸೇರಿದಂತೆ ಇತರ ಕಲುಷಿತ ಅಂಶಗಳು




ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪ–ರಿಣಾಮ ಬೀರುವ ಆತಂಕ ಎದುರಾಗಿದೆ. ಇದೇ ವೇಳೆ ಪಟ್ಟಣದ 10ನೇ ವಾರ್ಡ್‌ನಲ್ಲಿ ಚರಂಡಿಯನ್ನು ಅತಿಕ್ರಮಿಸಿಕೊಂಡು ಕಟ್ಟಡ ನಿರ್ಮಿಸಿರುವುದರಿಂದ ಚರಂಡಿ ನೀರು ಸರಾಗವಾಗಿ ಹರಿಯದೆ ರಸ್ತೆಯ ಮೇಲೆಯೇ ನಿಂತುಕೊಳ್ಳುತ್ತಿದೆ. ಇದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ದುರ್ವಾಸನೆ ಹಾಗೂ ಸೊಳ್ಳೆಗಳ ಕಾಟ ಹೆಚ್ಚಾಗಿ, ರೋಗರುಜಿನುಗಳು ಹರಡುವ ಪರಿಸ್ಥಿತಿ ನಿರ್ಮಾಣವಾಗಿದೆ.

10ನೇ ವಾರ್ಡ್‌ನಲ್ಲಿ ಚರಂಡಿ ಹಾಗೂ ರಸ್ತೆಯನ್ನು ಅತಿಕ್ರಮಿಸಿಕೊಂಡು ನಿರ್ಮಿಸಿರುವ ಕಟ್ಟಡಗಳನ್ನು ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಸೂಕ್ತ ಅಳತೆ ಮಾಡಬೇಕು. ನಿಯಮಬಾಹಿರವಾಗಿ ಚರಂಡಿ ಮತ್ತು ರಸ್ತೆ ಜಾಗ ಅತಿಕ್ರಮಿಸಿರುವುದು ಕಂಡುಬಂದಲ್ಲಿ ಅಂತಹ ಕಟ್ಟಡಗಳನ್ನು ತೆರವುಗೊಳಿಸಿ, ಚರಂಡಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಭೀಮೇಶ ನಾಯಕ, ಶಿವು ಪತ್ತಾರ, ಅಶೋಕ ನಾಯಕ, ಸಲಿಂಖಾನ್, ಸಿದ್ದು ಚಲುವಾದಿ, ಅಮರೇಶ ಹೊಸಮನಿ, ಶಾರು ಜೋಗೇರ್, ಅಮರಪ್ಪ ರಾಠೋಡ್ ಸೇರಿ ಇತರರು ಇದ್ದರು.

# ಶಿಕ್ಷಕರ ನೇಮಕಾತಿಯಲ್ಲಿ ಭಾಷಾ ಅಲ್ಪಸಂಖ್ಯಾತ ಮಾಧ್ಯಮದವರಿಗೂ ಅವಕಾಶ

## 800 ಉರ್ದು ಹಾಗೂ 200 ಮರಾಠಿ ಶಿಕ್ಷಕರ ನೇಮಕಾತಿಗೆ ಸಚಿವ ಸಂಪುಟ ಅನುಮೋದನೆ: ಸರ್ಕಾರದ ಧನಾತ್ಮಕ ಸ್ಪಂದನೆಗೆ ಸೋಲಿಡಾರಿಟಿ ಸ್ವಾಗತ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕರ್ನಾಟಕದಲ್ಲಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಷಾ ಅಲ್ಪಸಂಖ್ಯಾತ ಮಾಧ್ಯಮಕ್ಕೂ ಸಮಾನ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ಇತರ ಸಂಘ ಸಂಸ್ಥೆಗಳ ಜೊತೆಗೂಡಿ ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ನಡೆಸಿಕೊಂಡು ಬಂದ ನಿರಂತರ ಹೋರಾಟಕ್ಕೆ ಸರ್ಕಾರದಿಂದ ಧನಾತ್ಮಕ ಸ್ಪಂದನೆ ದೊರೆತಿರುವುದನ್ನು ಸ್ವಾಗತಿಸಿದೆ.

2026ರ ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಉರ್ದು, ಮರಾಠಿ ಸೇ–ರಿದಂತೆ ಭಾಷಾ ಅಲ್ಪಸಂಖ್ಯಾತ ಮಾಧ್ಯಮದ ಅಭ್ಯರ್ಥಿಗಳಿಗೆ ಸಮರ್ಪಕ ಅವಕಾಶ ಕಲ್ಪಿಸಲಾಗಿಲ್ಲ ಎಂಬ ವಿಚಾರವನ್ನು ಆರಂಭದಿಂದಲೂ ಸೋಲಿಡಾ–ರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ಸರ್ಕಾರದ ಗಮನಕ್ಕೆ ತರುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ, ಸರ್ಕಾರದ ಹಿರಿಯ ಅಧಿಕಾ–ರಿಗಳು, ಸಚಿವರು, ವಿಧಾನಮಂಡಲದ ಸದಸ್ಯರು ಹಾಗೂ ವಿವಿಧ ಆಯೋಗಗಳಿಗೆ ಮನವಿಗಳನ್ನು ಸಲ್ಲಿಸಿ ನಿರಂತರವಾಗಿ ಒತ್ತಾಯಿಸಲಾಗಿತ್ತು.


ಕರಡು ಅಧಿಸೂಚನೆಯಿಂದ ಹೋರಾಟಕ್ಕೆ ಚಾಲನೆ

ಜೂನ್ 29ರಂದು ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದ ಕರಡು ಅಧಿಸೂಚನೆ ಪ್ರಕಟವಾದ ಬಳಿಕ, ಎಸ್‌ಎಸ್‌ಎಲ್‌ಸಿ ಅಥವಾ ಪಿಯುಸಿಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಓದಿರಬೇಕು ಎಂಬ ಕಡ್ಡಾಯ ಷರತ್ತಿನ ಕು–ರಿತು ಸೋಲಿಡಾರಿಟಿ ಆಕ್ಷೇಪಣೆ ವ್ಯಕ್ತಪಡಿಸಿತು. ಜುಲೈ 3ರಂದು ಶಿಕ್ಷಣ ಇಲಾಖೆಗೆ ಲಿಖಿತ ಆಕ್ಷೇಪಣೆ ಸಲ್ಲಿಸಲಾಯಿತು. ಜುಲೈ 21ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್ ಅವರನ್ನು ಭೇಟಿ ಮಾಡಿ ಕರಡು ನಿಯಮಗಳ ಕುರಿತು ವಿವರವಾದ ಮನವಿ ಸಲ್ಲಿಸಲಾಯಿತು. ಜುಲೈ 30ರಂದು ಗ್ರೇಡ್?1 ಮತ್ತು ಗ್ರೇಡ್?2 ದೈಹಿಕ ಶಿಕ್ಷಕರ ನೇಮಕಾತಿಯಲ್ಲಿ ಬೋಧನಾ ಮಾಧ್ಯಮದ ಅರ್ಹತೆಯನ್ನು ಸ್ಪಷ್ಟಪಡಿಸುವಂತೆಯೂ ಒತ್ತಾಯಿಸಲಾಯಿತು.

ಆಗಸ್ಟ್ 10ರ ಅಧಿಸೂಚನೆಯ ಬಳಿಕ ಹೋರಾಟ ತೀವ್ರ

ಆಗಸ್ಟ್ 10ರಂದು ಶಿಕ್ಷಕರ ನೇಮಕಾತಿ ಅಧಿಸೂಚನೆ ಪ್ರಕಟವಾದ ನಂತರ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಕ್ಕೆ ಮಾತ್ರ ಹೆಚ್ಚಿನ ಅವಕಾಶ ಕಲ್ಪಿಸಲಾಗಿದ್ದು, ಉರ್ದು, ಮರಾಠಿ ಸೇರಿದಂತೆ ಭಾಷೆಗೆ ಸಮರ್ಪಕ ಅವಕಾಶವಿಲ್ಲ ಎಂಬುದು ಮತ್ತಷ್ಟು ಸ್ಪಷ್ಟವಾಯಿತು. ಇದರ ಜೊತೆಗೆ ಐದು ವರ್ಷಗಳ ವಿಶೇಷ ವಯೋಮಿತಿ ಸಡಿಲಿಕೆ ಇಲ್ಲದಿರುವುದು ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಗಣಿತ ಶಿಕ್ಷಕರ ಹುದ್ದೆಗಳನ್ನು ನೇಮಕಾತಿಗೆ ಒಳಪಡಿಸದಿರುವುದರ ಬಗ್ಗೆಯೂ ಸೋಲಿಡಾರಿಟಿ ಪ್ರಶ್ನೆ ಎತ್ತಿತು.

ಆಗಸ್ಟ್ 12ರಂದು ಶಿಕ್ಷಣ ಇಲಾಖೆಗೆ ತಿದ್ದುಪಡಿ ಮತ್ತು ಮರುಅಧಿಸೂಚನೆ ಹೊರಡಿಸುವಂತೆ ಮನವಿ ಸಲ್ಲಿಸಲಾಯಿತು. ಅದೇ ದಿನ ಸಚಿವರಾದ ಯು.ಟಿ. ಖಾದರ್ ಅವರನ್ನು ಭೇಟಿ ಮಾಡಿ ಸಮಸ್ಯೆಗಳ ಕುರಿತು ಮನವಿ ಸಲ್ಲಿಸಲಾಯಿತು. ಆಗಸ್ಟ್ 13ರಂದು ವಿಧಾನ ಪರಿಷತ್ ಸದಸ್ಯೆ ಬಲ್ಕೀಸ್ ಬಾನು ಅವರಿಗೆ ಮನವಿ ಸಲ್ಲಿಸಿ, ಶಿಕ್ಷಣ ಸಚಿವರ ಗಮನಕ್ಕೆ ವಿಷಯವನ್ನು ತಂದು ಭಾಷಾ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಅವಕಾಶ, ಐದು ವರ್ಷಗಳ ವಯೋಮಿತಿ ಸಡಿಲಿಕೆ ಹಾಗೂ ಸರ್ಕಾರಿ ಪ್ರೌಢಶಾಲೆಗಳ ಖಾಲಿ ಗಣಿತ ಶಿಕ್ಷಕರ ಹುದ್ದೆಗಳನ್ನು



ಭರ್ತಿ ಮಾಡುವಂತೆ ಒತ್ತಾಯಿಸಲಾಯಿತು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗಕ್ಕೂ ಮನವಿ ಸಲ್ಲಿಸಲಾಯಿತು. ಆಗಸ್ಟ್ 14ರಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ, ಮಾನವ ಹಕ್ಕುಗಳ ಆಯೋಗ ಹಾಗೂ ಕರ್ನಾಟಕ ಉರ್ದು ಅಕಾಡೆಮಿಗೂ ಮನವಿ ಸಲ್ಲಿಸಲಾಯಿತು. ಸೋಲಿಡಾರಿಟಿ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಿದ ಅಲ್ಪಸಂಖ್ಯಾತರ ಆಯೋಗವು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಪತ್ರ ಬರೆದು ಕ್ರಮ ಕೈಗೊಳ್ಳುವಂತೆ ಸೂಚಿಸಿರುವುದು ಹೋರಾಟಕ್ಕೆ ಮತ್ತಷ್ಟು ಬಲ ನೀಡಿತು.

ಅಭ್ಯರ್ಥಿಗಳ ಹೋರಾಟಕ್ಕೆ ನೇರ ಬೆಂಬಲ

ಆಗಸ್ಟ್ 16 ಮತ್ತು 17ರಂದು ವಿವಿಧ ಮಾಧ್ಯಮಗಳಲ್ಲಿ ಶಿಕ್ಷಕರ ನೇಮಕಾತಿಯಲ್ಲಿನ ಭಾಷಾ ಅಲ್ಪಸಂಖ್ಯಾತ ಅಭ್ಯರ್ಥಿಗಳ ಸಮಸ್ಯೆಗಳು ವ್ಯಾಪಕವಾಗಿ ಚರ್ಚೆಗೆ ಬಂದವು. ವಾರ್ತಾಭಾರತಿಯಲ್ಲಿ ವಿಶೇಷ ವರದಿ ಪ್ರಕಟವಾಗುವುದರ ಜೊತೆಗೆ ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕದ ಯೂಟ್ಯೂಬ್ ಚಾನೆಲ್‌ನಲ್ಲಿ ಶಿಕ್ಷಕ ಅಭ್ಯರ್ಥಿ ಮುರ್ತಝಾ ಇಳಕಲ್ ಅವರೊಂದಿಗೆ ವಿಶೇಷ ಚರ್ಚೆ ನಡೆಯಿತು.

ಆಗಸ್ಟ್ 18ರಂದು ರಾಜ್ಯದ ವಿವಿಧ ಜಿಲ್ಲೆಗಳಿಂದ ಬೆಂಗಳೂರಿನ ಕೆಎಂಡಿಸಿ ಭವನಕ್ಕೆ ಆಗಮಿಸಿದ್ದ ಶಿಕ್ಷಕ ಅಭ್ಯರ್ಥಿಗಳ ಹೋರಾಟಕ್ಕೆ ಸೋಲಿಡಾರಿಟಿ ನೇರವಾಗಿ ಸಾಥ್ ನೀಡಿತು. ಅಭ್ಯರ್ಥಿಗಳ ಜಂಟಿ ಕ್ರಿಯಾ ಸಮಿತಿ ರಚನೆಗೆ ನೆರವು ನೀಡುವುದರ ಜೊತೆಗೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭ್ಯರ್ಥಿಗಳ ನಿಯೋಗದೊಂದಿಗೆ ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು. ಹೊರ ಜಿಲ್ಲೆಗಳಿಂದ ಆಗಮಿಸಿದ್ದ ಅಭ್ಯರ್ಥಿಗಳಿಗೆ ರಾತ್ರಿ ವಸತಿ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲು ಸಹ ಸೋಲಿಡಾರಿಟಿ ತಂಡ ನೆರವಾಯಿತು.

ಆಗಸ್ಟ್ 19ರಂದು ಸಚಿವ ರಿಝ್ವಾನ್ ಅರ್ಷದ್ ಅವರನ್ನು ಅಭ್ಯರ್ಥಿಗಳ ನಿಯೋಗದೊಂದಿಗೆ ಭೇಟಿ ಮಾಡಿ ಸುದೀರ್ಘ ಚರ್ಚೆ ನಡೆಸಲಾಯಿತು. ಬಳಿಕ ವಿಧಾನಸೌಧಕ್ಕೆ ತೆರಳಿ ಸಚಿವ ಯು.ಟಿ. ಖಾದರ್ ಸೇರಿದಂತೆ ಹಲವು ಜನಪ್ರತಿನಿಧಿಗಳನ್ನು ಭೇಟಿ ಮಾಡಿ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ಉರ್ದು ಶಿಕ್ಷಕರ ನೇಮಕಾತಿ ಹಾಗೂ ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಮುಖ ವಿಚಾರಗಳ ಬಗ್ಗೆಯೂ ಸಭೆ ನಡೆಸಲಾಯಿತು.

ಆಗಸ್ಟ್ 20ರಂದು ಜಂಟಿ ಕ್ರಿಯಾ ಸಮಿತಿಯೊಂದಿಗೆ ವಿಧಾನಸೌಧಕ್ಕೆ ತೆರಳಿ ವಿಧಾನ ಪರಿಷತ್ ಸಭಾಪತಿ ಸಲೀಂ ಅಹ್ಮದ್ ಅವರ ಕಚೇರಿಯಲ್ಲಿ ನಡೆದ ಸಭೆಯಲ್ಲೂ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು.

800 ಉರ್ದು, 200 ಮರಾಠಿ ಶಿಕ್ಷಕರ ನೇಮಕಾತಿಗೆ ಸಚಿವ ಸಂಪುಟ ಅನುಮೋದನೆ

ಈ ನಿರಂತರ ಪ್ರಯತ್ನಗಳ ಫಲವಾಗಿ ಆಗಸ್ಟ್ 21ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ 800 ಉರ್ದು ಹಾಗೂ 200 ಮರಾಠಿ ಶಿಕ್ಷಕರ ನೇಮಕಾತಿಗೆ ಅನುಮೋದನೆ ನೀಡಿರುವುದು ಭಾಷಾ ಅಲ್ಪಸಂಖ್ಯಾತ ಶಿಕ್ಷಕ ಅಭ್ಯರ್ಥಿಗಳ ಹೋರಾಟಕ್ಕೆ ಮಹತ್ವದ ಮುನ್ನಡೆಯಾಗಿದೆ.

ಸರ್ಕಾರದ ಈ ನಿರ್ಧಾರವನ್ನು ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ಸ್ವಾಗತಿಸುತ್ತದೆ. ಆರ್ಥಿಕ ಇಲಾಖೆಯ ವರದಿ ಹಾಗೂ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ಬಳಿಕ ಶೀಘ್ರದಲ್ಲೇ ನೇಮಕಾತಿ ಅಧಿಸೂಚನೆ ಹೊರಬರಲಿದೆ ಎಂಬ ನಿರೀಕ್ಷೆ ಇದೆ.

"ಇದು ಅಂತ್ಯವಲ್ಲ, ಹೋರಾಟದ ಮುಂದಿನ ಹಂತಕ್ಕೆ ಆರಂಭ"

ಸರ್ಕಾರದ ಈ ನಿರ್ಧಾರವನ್ನು ಸ್ವಾಗತಿಸುವುದರ ಜೊತೆಗೆ, ಅನುಮೋದನೆ ಪಡೆದ 800 ಉರ್ದು ಹಾಗೂ 200 ಮರಾಠಿ ಶಿಕ್ಷಕರ ಹುದ್ದೆಗಳಿಗೆ ಶೀಘ್ರ ಅಧಿಕೃತ ನೇಮಕಾತಿ ಅಧಿಸೂಚನೆ ಹೊರಡಿಸಿ, ಅರ್ಹ ಅಭ್ಯರ್ಥಿಗಳಿಗೆ ನ್ಯಾಯಯುತ ಅವಕಾಶ ಕಲ್ಪಿಸಬೇಕು ಎಂದು ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ಆಗ್ರಹಿಸುತ್ತದೆ. ಭಾಷಾ ಅಲ್ಪಸಂಖ್ಯಾತ ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವುದು ಅವರ ಶಿಕ್ಷಣದ ಹಕ್ಕಿನ ಭಾಗವಾಗಿದೆ. ಆದ್ದರಿಂದ ಉರ್ದು, ಮರಾಠಿ ಸೇ–ರಿದಂತೆ ಎಲ್ಲಾ ಭಾಷಾ ಮಾಧ್ಯಮಗಳ ಶಿಕ್ಷಕರ ಹುದ್ದೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಗುರುತಿಸಿ ಭರ್ತಿ ಮಾಡಬೇಕು. ಜೊತೆಗೆ ಐದು ವರ್ಷಗಳ ವಯೋಮಿತಿ ಸಡಿಲಿಕೆ, ಗಣಿತ ಶಿಕ್ಷಕರ ಖಾಲಿ ಹುದ್ದೆಗಳ ಭರ್ತಿ ಹಾಗೂ ನೇಮಕಾತಿ ಪ್ರಕ್ರಿಯೆಯಲ್ಲಿನ ಇತರ ಬಾಕಿ ಬೇಡಿಕೆಗಳಿಗೂ ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ರಾಜ್ಯಾಧ್ಯಕ್ಷರಾದ ಡಾ. ನಸೀಂ ಅಹ್ಮದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೇಮಕಾತಿ ಪ್ರಕಟಣೆ

**ಏಈಆ ನೇಮಕಾತಿ 2026–750 ಅರಣ್ಯ ವೀಕ್ಷಕ (Forest Observer) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 30 ಜುಲೈ 2026**

KFD ನೇಮಕಾತಿ 2026: 750 ಅರಣ್ಯ ವೀಕ್ಷಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಅರಣ್ಯ ಇಲಾಖೆಯು ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಅರಣ್ಯ ವೀಕ್ಷಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31–ಆಗಸ್ಟ್–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: aranya.gov.in


## ಮುಧೋಳದಲ್ಲಿ ರುಲೋನ್ಸ್ ರಾಜ್ಯ ಮುಖ್ಯಸ್ಥ ಮನೋಜ್ ಪರ್ವತಿಕರ್ ಭೇಟಿ

❏ ನೈಜ್ಯ ದೆಸೆ ನ್ಯೂಸ್

ಮುಧೋಳ: ರುಲೋನ್ಸ್ ಸಂಸ್ಥೆಯ ರಾಜ್ಯ ಮುಖ್ಯಸ್ಥ ಮನೋಜ್ ಪರ್ವತಿಕರ್ ಅವರು ಮುಧೋಳ ಶಾಖೆಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ರುಲೋನ್ಸ್ ಮುಧೋಳ ಶಾಖೆಯ ಮುಖ್ಯಸ್ಥ ಮೊಹ್ಮದ್ ಹಂಚಿನಾಳ ಹಾಗೂ



ರೆಹಮಾನ್ ಮನಿಯಾರ ರಾಜ್ಯ ಮುಖ್ಯಸ್ಥ ಮನೋಜ್ ಪರ್ವತಿ–ಕರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಸನ್ಮಾನಿಸಿದರು. ಶಾಖೆಯ ವಿವಿಧ ಚಟುವಟಿಕೆಗಳು ಹಾಗೂ ಗ್ರಾಹಕರಿಗೆ ನೀಡಲಾಗುತ್ತಿರುವ ಸಾಲ ಸೌಲಭ್ಯಗಳ ಕುರಿತು ಪರಸ್ಪರ ಚರ್ಚೆ ನಡೆಸಲಾಯಿತು. ರುಲೋನ್ಸ್ ಸಂಸ್ಥೆಯು ಗೃಹ ಸಾಲ, ವೈಯಕ್ತಿಕ ಸಾಲ, ವ್ಯವಹಾರ ಸಾಲ, ಆಸ್ತಿ ಮೇಲಿನ ಸಾಲ ವಾಹನ ಸಾಲ ಸೇ–ರಿದಂತೆ ವಿವಿಧ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಗ್ರಾಹಕ–ರಿಗೆ ಸೂಕ್ತ ಹಣಕಾಸು ಸೇವೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಗ್ರಾಹಕರು ಸಾಲ ಸೌಲಭ್ಯ ಸದುಪಯೋಗ ಪಡೆದು ಕೊಳ್ಳಬೇಕು ಎಂದು ತಿಳಿಸಿದರು ಹೆಚ್ಚಿನ ಮಾಹಿತಿಗಾಗಿ ಈ ನಂಬರಿಗೆ ಸಂಪರ್ಕಿಸಬಹುದು ಸಂಸ್ಥೆಯ ಮುಖ್ಯಸ್ಥ 77603441338618981781 ಈ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿ ಹಾಗೂ ಗಣ್ಯರು ಉಪಸ್ಥಿತರಿದ್ದರು.

## ಅರಕೇರಾ ಜಾಮೀಯಾ ಮಸೀದಿಯಲ್ಲಿ ಈದ್ ಮಿಲಾದ್ ಶಾಂತಿ ಸಭೆ – ಸೌಹಾರ್ದತೆಯಿಂದ ಹಬ್ಬ ಆಚರಿಸಲು ಕರೆ

❏ ನೈಜ್ಯ ದೆಸೆ ನ್ಯೂಸ್

ಅರಕೇರಾ: ಜಾತಿ–ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಅಶಾಂತಿ ಕದಡುವ ವ್ಯವಸ್ಥೆ ವಿರುದ್ಧ ಕಾನೂನು ಸುಮ್ಮನಿರುವುದಿಲ್ಲ ಎಂದು ಪಿಐ ಎಸ್.ಮಂಜುನಾಥ ಹೇಳಿದರು. ಸ್ಥಳೀಯ ಜಾಮೀಯಾ ಮಸೀದಿಯಲ್ಲಿ ದೇವದುರ್ಗ ಪೊಲೀಸ್ ಠಾಣೆ ವತಿಯಿಂದ ಹಮ್ಮಿಕೊಂಡಿದ್ದ ಈದ್ ಮಿಲಾದ್ ಹಬ್ಬದ ಶಾಂತಿ ಸಭೆ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.



ಹುಟ್ಟುವಾಗ ಯಾವ ಜಾತಿಯಲ್ಲಿ ಹುಟ್ಟಬೇಕು ಎಂದು ಯಾರೂ ಅರ್ಜಿ ಹಾಕಿ ಹುಟ್ಟಿರಲ್ಲ. ಇದರ ನಡುವೆ ಬದುಕಿದಷ್ಟು ಜೀವನ ಬರೀ ಹೋರಾಟ ಮಾಡಿದರೆ ಉಪಯೋಗವಿಲ್ಲ. ಬದಕ್ಕಿದ್ದಾಗ ಆದರ್ಶ ಜೀವನ ನಡೆಸಬೇಕು. ಆದರೆ ಜಾತಿ, ಧರ್ಮಗಳ ಹೆಸರಿನಲ್ಲಿ ಕೋಮು ಗಲಭೆಗೆ ಅವಕಾಶ ಮಾಡಿಕೊಟ್ಟರೆ, ಇಡೀ ಜೀವನ ಕೋರ್ಟು, ಕಚೇರಿ, ಪೊಲೀಸ್ ಸ್ಟೇಷನ್ ಗಳಿಗೆ ಅಲೆದಾಡಬೇಕಾಗುತ್ತದೆ. ಇದ–ರಿಂದ ಹಬ್ಬಗಳನ್ನು ಶಾಂತಿಯುತವಾಗಿ ಆಚರಿಸಬೇಕು ಎಂದರು. ಕಲಬುರ್ಗಿ ಕೇಂದ್ರಿಯ ವಿವಿ ಸಹಾಯಕ ಕುಲಪತಿ ಅಜೀಂಪಾಷ ಬಡಿಗೇರ್ ಮಾತನಾಡಿ, ಸಂತೋಷದ ಬಾಂಧವ್ಯ ಬೆಸೆಯುವುದು ಹಬ್ಬಗಳ ಉದ್ದೇಶ. ಜಾತಿ, ಧರ್ಮಗಳ ಹೆಸ–ರಿನಲ್ಲಿ ದ್ವೇಷ, ಅಸೂಯೆ ಹುಟ್ಟಿಸಬಾರದು. ಡಿಜೆ ಸದ್ದು ಪ್ರಾಣಿ, ಪಕ್ಷಿ, ಮನುಷ್ಯನ ನೆಮ್ಮದಿ ಹಾಳು ಮಾಡುತ್ತದೆ. ನಾವೆಲ್ಲರೂ ಒಂದೇ ಎಂಬ ಭಾವದಿಂದ ಬದುಕಬೇಕು ಎಂದರು. ಪ್ರಮುಖರಾದ ರಾಕೇಶ ನಾಯಕ ಪೋ.ಪಾ, ಚಂದ್ರಶೇಖರ ಶೆಟ್ಟಿ, ಭಾಷ ಸಾಬ ವೆಲ್ಡಿಂಗ್, ಜಲೀಲ್ ಸಾಬ್, ಅಲೀಂ ಖಾಜಿ, ಹುಸೇನ್ ಭಾಷ, ಮಹಿಮೂದ್ ಇತರರಿದ್ದರು.

## 11 ನೇ ವರ್ಷದ ಪುಣ್ಯಸ್ಮರಣೆ

❏ ನೈಜ್ಯ ದೆಸೆ ನ್ಯೂಸ್

ಅರಕೇರಾ: ರಾಯಚೂರು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ದಿ.ವೆಂಕಟೇಶನಾಯಕ ಅವರ 11 ನೇ ವರ್ಷದ ಪುಣ್ಯಸ್ಮರಣೆ



ಅಂಗವಾಗಿ ಹಾಗೂ ಪೂಜಾ ಕಾರ್ಯಕ್ರಮವನ್ನು ಜುಟಮರಡಿ ಗ್ರಾಮದಲ್ಲಿನ ಜರುಗಿತು. ಮುಂಜಾನೆ ದಿ.ವೆಂಕಟೇಶನಾಯ ಮಾಜಿ ಸಂಸದರ ಪುತ್ಥಳಿಗೆ ಕುಟುಂಬಸ್ಥರಾದ ರಾಜಶೇಖರನಾಯಕ ಆರ್ ಡಿಸಿಸಿ ಬ್ಯಾಂಕ್ ನಿರ್ದೇಶಕರು, ಶ್ರೀದೇವಿ ನಾಯಕ ಮಹಿಳಾ ಕಾಂಗ್ರೆಸ್ ರಾಷ್ಟ್ರೀಯ ಕಾಯದರ್ಶಿ ಮತ್ತು ಕುಟುಂಬಸ್ಥರ ಜೊತೆಯಲ್ಲಿ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು ಎಲ್ಲಾ ಸಮಾಜದ ಮುಖಂಡರುಗಳು ಭಾಗವಹಿಸಿದ್ದರು. ಸಂದರ್ಭದಲ್ಲಿ ಭಾಗವಹಿಸಿದವರಿಗೂ ಅನ್ನಸಂತರ್ಪಣೆಯನ್ನು ಮಾಡಲಾಗಿತ್ತು

## ದಲಿತ ಹಾಗೂ ದಲಿತ ಮಹಿಳೆಯರ ಕೊಲೆ ಪ್ರಕರಣದ ಆರೋಪಿಗಳಿಗೆ ಕಠಿಣ ಕಾನೂನು ಕ್ರಮ ಜರುಗಿಸುವಂತೆ ರಾಜ್ಯ ಮಹಿಳಾ ಒಕ್ಕೂಟ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಸುಮಾರು 25 ವರ್ಷಗಳಿಂದ ದೇವದಾಸಿ ಪದ್ಧತಿ ನಿರ್ಮೂಲನೆ ಬಾಲ್ಯವಿವಾಹ, ಬಾಲಕಾರ್ಮಿಕತೆ, ಮಕ್ಕಳ ಶಿಕ್ಷಣ , ಮಹಿಳೆಯರ ಮೇಲಿನ ದೌರ್ಜನ್ಯ ಕುರಿತು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ದಲಿತ ಹಾಗೂ ದಲಿತ ಮಹಿಳೆಯರ ಕೊಲೆ ಪ್ರಕರಣದ ಆರೋಪಿಗಳಿಗೆ ಕಠಿಣ ಕಾನೂನು ಕ್ರಮ ಜರುಗಿಸುವಂತೆ ರಾಜ್ಯ ಮಹಿಳಾ ಒಕ್ಕೂಟ ಹಾಗೂ ಗ್ರಾಕೋಸ್ ಸಂಘಟನೆಯ ಮೋಕ್ಷಮ್ಮ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು.

ನಮ್ಮ ರಾಯಚೂರು ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ದೈಹಿಕ ದೌರ್ಜನ್ಯ ಹಾಗೂ ಕೊಲೆ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ತೀವ್ರವಾಗಿ ಖಂಡಿಸುತ್ತೇವೆ .ಇತ್ತೀಚೆಗೆ ನಡೆದ ಜಿಲ್ಲೆಯ ಭೂಮಾನಂದ ಕೊಲೆ ಪ್ರಕರಣ, ಹೊಕ್ರಾಣಿ ಅಶ್ವಿನಿ ಹಾಗೂ ಕರಡಕಲ್ ಗ್ರಾಮದ ರಾಣೇಮ್ಮ ಕೊಲೆ ಪ್ರಕರಣವೂ ಇಡೀ ಸಮಾಜವನ್ನೇ ತಲೆ ತಗ್ಗಿಸುವಂತೆ ಮಾಡಿದೆ.




ಈ ಘಟನೆಯು ಸಾರ್ವಜನಿಕರಲ್ಲಿ ವಿಶೇಷವಾಗಿ ದಲಿತರು ಹಾಗೂ ದಲಿತ ಮಹಿಳೆಯರು ಮತ್ತು ವಿದ್ಯಾರ್ಥಿನಿಯರಲ್ಲಿ ತೀವ್ರ ಭಯ ಹಾಗೂ ಅಭದ್ರತೆಯ ಭಾವನೆಯನ್ನು ಮೂಡಿಸಿದೆ. ಕಾನೂನು ಸುವ್ಯವಸ್ಥೆಯ ಬಗ್ಗೆ ಸಾರ್ವಜನಿಕರಲ್ಲಿ ಆತಂಕ ಎದುರಾಗಿದೆ. ಆದ್ದರಿಂದ, ದಲಿತರು ಹಾಗೂ ದಲಿತ ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಪೊಲೀಸ್ ಇಲಾಖೆಯೂ ಕೆಲವು ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು

### ಹಕ್ಕೋತ್ತಾಯಗಳು:

1. ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದಲ್ಲಿ ನಡೆದ ಭೂಮನಂದ ಕೊಲೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು .
2. ಇತ್ತೀಚಿಗೆ ಕೊಲೆಯಾದ ಅಶ್ವಿನಿ ಹಾಗೂ ರಾಣೆಮ್ಮನ ಕೊಲೆ ಹಾಗೂ ದೌರ್ಜನ್ಯ ಪ್ರಕರಣದ ಆರೋಪಿಗಳನ್ನು ಕೂಡಲೇ ಬಂಧಿಸಿ, ಸೂಕ್ತ ಸಾಕ್ಷ್ಯಾಧಾರಗಳೊಂದಿಗೆ ತ್ವ–ರಿತವಾಗಿ ಕಾನೂನು ಕ್ರಮ ಜರುಗಿಸಿ ಸಮಾಜ–ಕ್ಕೆ ಕಠಿಣ ಸಂದೇಶ ರವಾನಿಸಬೇಕು.
3. ಮಹಿಳೆಯರು, ವಿದ್ಯಾರ್ಥಿನಿಯರು ಓಡಾಡುವ ಶಾಲೆ , ಕಾಲೇಜು , ಬಸ್ ನಿಲ್ದಾಣ ಹಾಗೂ ನಿರ್ಜನಾ ಪ್ರದೇಶಗಳಲ್ಲಿ ಪೊಲೀಸ್ ಗಸ್ತನ್ನು ತೀವ್ರಗೊಳಿಸಬೇಕು .
4. ಸಿಸಿಟಿವಿ ಕ್ಯಾಮರಾಗಳ ಅಳವಡಿಕೆ ಮತ್ತು ಮಹಿಳಾ ಹೆಲ್ಪಲೈನ್ ಮುಂತಾದ ಸುರಕ್ಷತಾ ವ್ಯವಸ್ಥೆಗಳನ್ನು ಜಿಲ್ಲೆಯಾದ್ಯಂತ ಮತ್ತಷ್ಟು ಬಲಪಡಿಸಬೇಕು.
5. ನಮ್ಮ ಜಿಲ್ಲೆಯ ದಲಿತ ಯುವಕರು ಹಾಗೂ ದಲಿತ ಹೆಣ್ಣುಮಕ್ಕಳು ಭಯ ಮುಕ್ತ ವಾತಾವರಣದಲ್ಲಿ ಬದುಕಲು ಪೊಲೀಸ್ ಇಲಾಖೆಯು ಸೂಕ್ತ ರಕ್ಷಣೆ ನೀಡಬೇಕು ಮತ್ತು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ನ್ಯಾಯ ಒದಗಿಸಿಕೊಡಬೇಕೆಂದು ಒತ್ತಾಯಿಸಿದರು .

ಈ ಸಂದರ್ಭದಲ್ಲಿ ಗುಂಡಪ್ಪ , ಹನುಮೇಶ್ , ಸಾವಿತ್ರಿ , ನೀಲಮ್ಮ , ಶಾಂಭವಿ , ಅಕ್ಕಮ್ಮ , ಮರಿಯಮ್ಮ , ಉಮಾದೇವಿ , ಹುಲುಗೆಮ್ಮ , ರಾಧಾ , ಶಾಂತ , ಇಂದ್ರಮ್ಮ , ಶಿವಮ್ಮ , ದ್ಯಾಮವ್ವ , ಆದಮ್ಮ , ವೀರಪಮ್ಮ , ನಾಗರತ್ನ , ಟಿ. ಯಲ್ಲಮ್ಮ , ಶ್ವೇತ , ರೇಣುಕಾ, ಉಮಾಶ್ರೀ ಸೇರಿದಂತೆ ಇತರರು ಇದ್ದರು .

## ಈದ್ ಮಿಲಾದ್ ಹಬ್ಬದ ಪ್ರಯುಕ್ತ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಸಿಪಿಐ ಪುಂಡಲೀಕ್ ನೇತೃತ್ವದಲ್ಲಿ ಸಭೆ

❏ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಈದ್ ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೇವದುರ್ಗ ಸಿಪಿಐ ಪುಂಡಲೀಕ್ ಅವರ ನೇತೃತ್ವದಲ್ಲಿ ಮುಸ್ಲಿಂ ಸಮುದಾಯದ ಮುಖಂಡರು ಹಾಗೂ ಪ್ರಮುಖರ ಸಭೆ ಸೋಮವಾರ ನಡೆಯಿತು.

ಸಭೆಯಲ್ಲಿ ಮಾತನಾಡಿದ ಸಿಪಿಐ ಪುಂಡಲೀಕ್ ಅವರು, ಹಬ್ಬದ ಸಂದರ್ಭದಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಶಿಸ್ತು ಕಾಪಾಡಲು ಎಲ್ಲರೂ ಸಹಕ–ರಿಸಬೇಕು. ಹಿರಿಯರು ಯುವಕರ ಮೇಲೆ ನಿಗಾ ವಹಿಸಿ, ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಎಚ್ಚ–ರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಹಬ್ಬದ ಆಚರಣೆ ನಡೆಸಬೇಕು. ಪೊಲೀಸ್ ಇಲಾಖೆಯ ನಿರ್ದೇಶನ ಹಾಗೂ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಶಾಂತಿಯುತವಾಗಿ ಹಬ್ಬ ಆಚರಿಸಬೇಕು ಎಂದು ಅವರು ತಿಳಿಸಿದರು. ಜಾಲಹಳ್ಳಿ ಪಟ್ಟಣವು ಶಾಂತಿ ಮತ್ತು ಸೌಹಾರ್ದತೆಗೆ ಹೆಸರಾಗಿರುವ ಊರಾಗಿದ್ದು, ಇದೇ ಪರಂಪರೆಯನ್ನು ಮುಂದುವ–ರಿಸಿಕೊಂಡು ಹೋಗಬೇಕು ಎಂದು ಸಿಪಿಐ ಪುಂಡಲೀಕ್ ಹೇಳಿದರು. ಇದೇ ಸಂದರ್ಭದಲ್ಲಿ ಸಭೆಯಲ್ಲಿ ಭಾಗವಹಿಸಿದ್ದ ಮುಸ್ಲಿಂ ಬಾಂಧವರಿಗೆ ಈದ್ ಮಿಲಾದ್ ಹಬ್ಬದ ಶುಭಾಶಯಗಳನ್ನು ಕೋರಿದರು.

ಸಭೆಯಲ್ಲಿ ಊರಿನ ಮುಖಂಡರಾದ ಹಾಜಿ ಮಲಿಕ್ ಅಹ್ಮದ್ ಸಾಬ್ ಸುರ್ನೋಬತ್, ಬಾಬಾ ಮೆಡಿಕಲ್,



ರಾಜ ಮೊಹಮ್ಮದ್ ಸಾಬ್ ಕಲೆಗಾರ, ನೂರ್ ಮೊಹಮ್ಮದ್ ಬಳಿಗಾರ್, ಯಲ್ಲಪ್ಪ ಗಾಜಲದಿನ್ನಿ,ರಿಯಾಜ್ ಆರ್ತಿ, ಜಹಿರ್, ಖಲೀಲ್ ಅಹ್ಮದ್, ಯೂಸುಫ್ ಪಟೇಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳು ಮೊಬೈಲ್ ಬಿಡಿ ಕ್ರೀಡಾ ಚಟುವಟಿಕೆಗಳನ್ನು ಬೆಳೆಸಿಕೊಳ್ಳಿ : ಜೂಗಲ್ ಮಂಜುನಾಯಕ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳನ್ನು ಬೆಳೆಸಿಕೊಳ್ಳುವುದರಿಂದ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯ ಜೊತೆಗೆ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗುತ್ತದೆ ಎಂದು ತಹಶೀಲ್ದಾರ್ ಜೂಗಲ್ ಮಂಜುನಾಯಕ ಹೇಳಿದರು.

ಪಟ್ಟಣದ ಸಣಾಪುರ ರಸ್ತೆಯಲ್ಲಿರುವ ರೈನ್‌ಬೋ ಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ಆರಂಭಗೊಂಡ ಎರಡು ದಿನದ ಕಂಪ್ಲಿ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟಕ್ಕೆ ಕ್ರೀಡಾ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿ, ಶಿಕ್ಷಣದ ಜೊತೆಗೆ ಕ್ರೀಡೆಗೂ ಹೆಚ್ಚಿನ ಅಧ್ಯತೆ ನೀಡುವ ಮೂಲಕ ಸಾಧನೆಯ ಗುರಿ ತಲುಪಬೇಕು.

ಆಧುನಿಕ ಯುಗದಲ್ಲಿ ಶಿಕ್ಷಣ–ಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಆ ದೃಷ್ಟಿಯಿಂದ ಒಳ್ಳೆಯ ಕ್ರೀಡಾಪಟುಗಳಾಗುವ ಜೊತೆಗೆ ಉನ್ನತ ಮಟ್ಟದ ಶಿಕ್ಷಣದೊಂದಿಗೆ




ಹುದ್ದೆಗಳನ್ನು ಪಡೆದುಕೊಳ್ಳಬೇಕು ಎಂದರು. ರೈನ್‌ಬೋ ಕಾಲೇಜಿನ ಸಂಸ್ಥಾಪಕ ಕಾರ್ಯದರ್ಶಿ ಕೆ.ಎಸ್.ಚಾಂದ್‌ಬಾಷಾ ಇವರು ಪ್ರತಿಜ್ಞಾವಿಧಿ ಬೋಧಿಸಿದ ನಂತರ ಮಾತನಾಡಿ, ಕ್ರೀಡಾಕೂಟದಲ್ಲಿ ನಿರ್ಣಾಯಕರ ತೀರ್ಪು ನ್ಯಾಯಯುತವಾಗಿರುವುದು ಕ್ರೀಡೆಯ ನಿಜವಾದ ಮೌಲ್ಯವನ್ನು ಮತ್ತು ಕ್ರೀಡಾಸ್ಫೂರ್ತಿಯನ್ನು ಕಾಪಾಡಲು ಅತ್ಯಂತ ಮುಖ್ಯವಾಗಿದೆ. ಇದು ಸೋಲು–ಗೆಲುವುಗಳಿಗಿಂತ ಕ್ರೀಡಾಮನೋಭಾವಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ. ಆರೋಗ್ಯದಿಂದಿರಲು ಕ್ರೀಡೆಗಳು ಸಹ ಸಹಕಾ–ರಿಯಾಗಲಿವೆ. ಆದ್ದರಿಂದ ಶಿಕ್ಷಣದ ಜೊತೆಗೆ ಕ್ರೀಡೆಗಳಿಗೆ ಆದ್ಯತೆ ನೀಡುವ ಮೂಲಕ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಶ್ರೀನಿವಾಸರಾವ್ ಇವರು ಕ್ರೀಡಾ ಧ್ವಜರೋಹಣ ನೆರವೇರಿಸಿದರು. ರೈನ್‌ಬೋ ಕಾಲೇಜಿನ ಪ್ರಾಚಾರ್ಯ ಡಿ.ಕೆ ಅಜೀಜ್ ಉಲ್ ಹಕ್ ಅಧ್ಯಕ್ಷತೆವಹಿಸಿದ್ದರು. ಇಲ್ಲಿನ ಕ್ರೀಡಾಕೂಟದಲ್ಲಿ ಪಟ್ಟಣ ಹಾಗೂ ಗ್ರಾಮೀಣ ಭಾಗದ ಒಟ್ಟು 7 ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕ್ರೀಡಾಕೂಟದ ಉದ್ಘಾಟನಾ ಪಂದ್ಯದ ವಾಲಿಬಾಲ್ ಕ್ರೀಡೆಯಲ್ಲಿ ರೈನ್‌ಬೋ ಕಾಲೇಜಿನ ಬಾಲಕರ ತಂಡ ಮೊದಲ ಗೆಲುವಿನೊಂದಿಗೆ ಶುಭಾರಂಭ ಮಾಡಿತು. ಈ ಸಂದರ್ಭದಲ್ಲಿ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಪಿ.ಮೂಕಯ್ಯಸ್ವಾಮಿ, ಅಕ್ಕಿಗಿರಿಣಿ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ಎಂ.ಹೇಮಯ್ಯಸ್ವಾಮಿ, ರೈನ್‌ಬೋ ಸಂಸ್ಥೆಯ ಅಧ್ಯಕ್ಷ ಶಾರುಖ್ ಕೆ.ಎಸ್, ಖಜಾಂಚಿ ಕೆ.ಎಸ್ ಮೆಹಬೂಬ, ಕಾಲೇಜು ಉಪನ್ಯಾಸಕರಾದ ಮಾರೆಪ್ಪ, ಸಿದ್ದಪ್ಪ ಪರಮೇಶ್ವರ, ವಿರೇಶ ಕೆ.ಬಿ, ಜಿ.ಮಹಾಬಲೇಶ್ವರಪ್ಪ, ಬಸವರಾಜ ನಾಯಕ, ಬಸವರಾಜಸ್ವಾಮಿ, ಶಿಕ್ಷಣ ಸಂಯೋಜ–ಕ ಟಿ.ಎಂ.ಬಸವರಾಜ, ಉಪ ಪ್ರಾಚಾರ್ಯ ನವೀನ್ ಕುಮಾರ ಹೆಚ್.ಆರ್, ದೈಹಿಕ ಶಿಕ್ಷಣ ನಿರ್ದೇಶಕ ಸಿ.ಜಡೆಪ್ಪ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಭೀರಲಿಂಗೇಶ್ವರ, ಮುಖಂಡರಾದ ಭಟ್ಟ ಪ್ರಸಾದ್, ಬಿ.ಸಿದ್ದಪ್ಪ, ಸಿ.ಆರ್. ಹನುಮಂತ, ಬಾಲೆಸಾಬ್, ವೆಂಕಟರಮಣ, ರಮೇಶ ಶಿವಪುರ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವರದಿ : ಜಿಲಾನಸಾಬ್ ಬಡಿಗೇರ್

### ಐತಿಹಾಸಿಕ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ನೂತನ ದೇವಸ್ಥಾನ ಉದ್ಘಾಟನೆ ಅದ್ದೂರಿಯಾಗಿ ನಡೆದ ನೂತನ ಮೂರ್ತಿಗಳ ಭವ್ಯ ಮೆರವಣಿಗೆ

## ಮೆರವಣಿಗೆಗೆ ಚಾಲನೆ ನೀಡಿದ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ನೂತನ ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನ ಉದ್ಘಾಟನೆ ಹಾಗೂ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಮಹೋತ್ಸವ ಹಿನ್ನಲೆ ಕಂಪ್ಲಿ ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿ ಕುಂಭ, ಕಳಸ, ಮಕ್ಕಳ ವೇಷಭೂಷ ಸೇರಿದಂತೆ ವಿವಿಧ ಕಲಾ ಪ್ರಕಾರಗಳ ನಡುವೆ ನೂತನ ಮೂರ್ತಿಗಳ ಭವ್ಯ ಮೆರವಣಿಗೆ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು.

ಪ್ರಾಚೀನ ಕಾಲದಲ್ಲೇ ಸ್ಥಾಪಿತವಾದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ತನ್ನದೇ ಆದ ಇತಿಹಾಸ ಇದ್ದು, ಇಂತಹ ಐತಿಹಾಸಿಕ ಗ್ರಾಮದಲ್ಲಿ ನೂತನ ಮೂರ್ತಿಗಳ ಪುರ ಪ್ರವೇಶ ಕಾರ್ಯಕ್ರಮದಲ್ಲಿ ಭಕ್ತರ ಉತ್ಸಾಹ, ಹುಮ್ಮಸ್ಸು ಕಂಡು ಬಂತು. ಗ್ರಾಮದ ಎದುರು ಬಸವಣ್ಣ ದೇವಸ್ಥಾನದಿಂದ ಪುರ ಪ್ರವೇಶದ ಹಿನ್ನಲೆ ನೂತನ ಶಿವಲಿಂಗ, ಗಣೇಶ, ನಂದಿ, ನಾಗ ಮೂರ್ತಿಗಳ ಭವ್ಯ ಮೆರವಣಿಗೆ ವಿವಿಧ ಕಲಾ ಪ್ರಕಾರಗಳಲ್ಲಿ ಅದ್ದೂರಿಯಾಗಿ ಜರುಗಿತು. ಈ ಮೆರವಣಿಗೆಯಲ್ಲಿ ಸುಮಂಗಲಿಯರ ಕುಂಭ, ಕಳಸ, ಮಹಿಳೆಯರ ಕೋಲಾಟ, ಭಜನೆ, ಡೊಳ್ಳು ಕುಣಿತ, ತಾಷಾರಾಂಡೋಲ್, ನಂದಿ ಕೋಲು, ಕಹಳೆ ವಾದನ, ಪಾರ್ವತಿ, ಪರಮೇಶ್ವರ, ಮಹಾನೀಯರ ಛದ್ಮಾವೇಷ, ಹನುಮಾನ್ ಮಾಲಾಧಾ–ರಿಗಳು ಸೇರಿದಂತೆ ವಿವಿಧ ಪ್ರಕಾರಗಳು



ಪಾಲ್ಗೊಂಡಿದವು. ತದನಂತರ ದೇವಸ್ಥಾನಕ್ಕೆ ಆಗಮಿಸಿ, ಗೋಮಾತೆ, ವಾಸ್ತು, ವಿನಾಯಕ ಪೂಜೆಯೊಂದಿಗೆ ಶ್ರೀಗಳ ಸಮ್ಮುಖದಲ್ಲಿ ದೇವಸ್ಥಾನ ಪ್ರವೇಶ ಹಾಗೂ ಜಲಾಧಿವಾಸ ಶ್ರದ್ಧಾಭಕ್ತಿಯಿಂದ ಅಚ್ಚುಕಟ್ಟಾಗಿ ಜರುಗಿತು.

ಸಂಜೆ ಕ್ಷೀರಾಧಿವಾಸ, ಉತ್ತರ ಪೂಜೆಗಳು ನಡೆದವು. ಇಲ್ಲಿನ ಎದುರು ಬಸವಣ್ಣ ದೇವಸ್ಥಾನ ಬಳಿಯಲ್ಲಿ ಸ್ಥಳೀಯ ಹಂಪಿ ಸಾವಿರ ದೇವರ ಮಹಾಂತ ಮಠದ ಪರಮಪೂಜ್ಯ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿ ಇವರ ದಿವ್ಯ ಸಾನಿಧ್ಯದಲ್ಲಿ ಭವ್ಯ ಮೆರವಣಿಗೆಗೆ ಚಾಲನೆ ನೀಡಿದ ನಂತರ ಮಾತನಾಡಿ, ಗ್ರಾಮದಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ನೆಲೆಸಿದ ದಿನದಿಂದಲೂ ಪವಾಡ ಪುರಷನಾಗಿ, ದಿನನಿತ್ಯ ಆರಾಧಿಸುವ ಭಕ್ತರ ಬೇಡಿಕೆಗಳಿಗೆ ಇಷ್ಟಾರ್ಥ ಪ್ರಾಪ್ತಿ ನೀಡುತ್ತಿದ್ದಾರೆ. ಇಲ್ಲಿನ ದೇವರ ಶಕ್ತಿ ಬಹಳ ದೊಡ್ಡದಿದೆ.

ಐತಿಹಾಸಿಕ ಹಿನ್ನಲೆ ಅರಿತುಕೊಂಡಾಗ ಮಾತ್ರ ಮನುಷ್ಯನಲ್ಲಿ ಆಧ್ಯಾತ್ಮಕ ಚಿಂತನೆಗಳು ಮೂಡಲು ಸಾಧ್ಯ. ಗ್ರಾಮದಲ್ಲಿರುವ ಎಲ್ಲಾ ಸಮಾಜದವ ಭಕ್ತಿ ದೊಡ್ಡದಿದೆ. ಇಂದು ಈ ಮಟ್ಟದಲ್ಲಿ ನೂತನ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ದೇವಸ್ಥಾನ ಸ್ಥಾಪನೆಗೆ ಸಹಕಾರವಿದೆ. ಲೋಕಕಲ್ಯಾಣಕ್ಕಾಗಿ ದೇವರ ಆರಾಧನೆ ಮತ್ತು ಧಾರ್ಮಿಕ ಕಾರ್ಯಕ್ರಮಗಳು ಅಗತ್ಯವಾಗಿವೆ. ಇಲ್ಲಿನ ಸದ್ಭಕ್ತರ ಸೇವೆಗೆ ಆ ದೇವರು ಸಕಾಲದಲ್ಲಿ ಮಳೆ, ಬೆಳೆ, ಸಮೃದ್ಧಿಯನ್ನು ದಯಪಾಲಿಸಲಿ ಎಂದರು. ಇಲ್ಲಿನ ದೇವಸ್ಥಾನದ ಗರ್ಭಗುಡಿಯ ಎದು–ರಿಗೆ ವಾಗಿ ಧ್ವಜಸ್ತಂಭ ಪ್ರತಿಷ್ಠಾಪಿಸಲಾಯಿತು. ಇಲ್ಲಿನ ಮೆರವಣಿಗೆಯಲ್ಲಿ ಹಾಲಿ ಶಾಸಕ ಜೆ.ಎನ್.ಗಣೇಶ್, ಮಾಜಿ ಶಾಸಕ ಟಿ. ಎಚ್.ಸುರೇಶ್ ಬಾಬು ಪಾಲ್ಗೊಂಡು, ದೇವರ ಕೃಪೆಗೆ ಪಾತ್ರರಾದರು.

ಭವ್ಯ ಮೆರವಣಿಗೆಯ ಸಂಭ್ರಮದ ಸಂದರ್ಭದಲ್ಲಿ ಪಟಾಕಿಗಳ ಭರ್ಜರಿ ಸ್ದದು ಜೋರಾಗಿ ಮೊಳಗಿ–ತು. ನಂತರ ಅನ್ನ ಸಂತಾರ್ಪಣೆ ಜರುಗಿತು. ಈ ಸಂದರ್ಭದಲ್ಲಿ ಮಾಜಿ ತಾಪಂ ಸದಸ್ಯ ಬಿ. ಸದಾಶಿವಪ್ಪ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸದಸ್ಯ ಬಿ. ಮಹೇಶಗೌಡ, ವೀರಶೈವ ಸಮಾಜದ ಅಧ್ಯಕ್ಷ ಹಂಪಿ ಜಡಿಮೂರ್ತಿ, ಕವಿತಾಳ ಪ್ರವೀಣ್, ಎಸ್. ಶರಣ ಬಸವನಗೌಡ, ಮುಖಂಡರಾದ ವಕೀಲ ಕರಿಬಸಪ್ಪ, ವೇಣು ಗೋಪಾಲಾಚಾರ್ಯ, ಬೇರ್ಗಿ ಭೀಮನಗೌಡ, ಜಗದೀಶ, ವೈ. ರಾಘವೇಂದ್ರ ರೆಡ್ಡಿ, ಮೀನಕರೆ ಶೇಖಣ್ಣ, ಕೆ.ಶೇಖರರೆಡ್ಡಿ, ಜಿ.ಎಂ. ಶರಣಯ್ಯ, ಜನಪ್ರತಿನಿಧಿಗಳು, ಮುಖಂಡರು, ಸ್ಥಳೀಯ ಸೇರಿದಂತೆ ಸುತ್ತಲಿನ ಸದ್ಭಕ್ತರು ಪಾಲ್ಗೊಂಡಿದ್ದರು.

## ವಚನ ದರ್ಶನ –7.

ಉಳ್ಳವರು ಶಿವಾಲಯ ಮಾಡಿಹರು, ನಾನೇನ ಮಾಡುವೆ ಬಡವನಯ್ಯಾ. ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರ ಹೊನ್ನ ಕಲಶವಯ್ಯಾ. ಕೂಡಲಸಂಗಮದೇವಾ, ಕೇಳಯ್ಯಾ ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.12ನೇ ಶತಮಾನದಲ್ಲಿ ಬಸವವಾದಿ ಶರಣ–ರ ಮೂಲಕ ಮೂಡಿಬಂದ ಅಪೂರ್ವ ಕಾವ್ಯ ಹಾಗೂ ಸುಧಾರಣಾ ಆಂದೋಲನವಾಗಿದೆ. ಇದು ಸಾಮಾಜಿಕ ಸಮಾನತೆ, ಕಾಯಕ ತತ್ವ ಮತ್ತು ಸರಳ ಭಕ್ತಿಯ ಮಹತ್ವವನ್ನು ಸಾರುತ್ತದೆ.

ಉಳ್ಳವರು ಶಿವಾಲಯ ಮಾಡುವರು" ಎಂಬುದು 12ನೇ ಶತಮಾನದ ಸಾಮಾಜಿಕ ಕ್ರಾಂತಿಕಾರಿ, ಭಕ್ತಿ ಚಳುವಳಿಯ ಹರಿಕಾರ ಜಗಜ್ಯೋತಿ ಬಸವಣ್ಣನವರ ಅತ್ಯಂತ ಪ್ರಸಿದ್ಧ ಹಾಗೂ ಪ್ರಭಾವಶಾಲಿ ವಚನವಾಗಿದೆ. ಈ ವಚನವು ಬಾಹ್ಯ ಆಡಂಬರದ ಆಚರಣೆಗಳಿಗಿಂತ ಅಂತರಂಗದ ಶುದ್ಧ ಭಕ್ತಿಯೇ ಶ್ರೇಷ್ಠ ಎಂದು ಸಾರುತ್ತದೆ. ದುಡ್ಡು, ಆಸ್ತಿ ಮತ್ತು ಅಧಿಕಾರ ಉಳ್ಳವರು ಭಗವಂತನಿಗೆ ದೊಡ್ಡ ದೊಡ್ಡ ಶಿವನ ದೇವಸ್ಥಾನಗಳನ್ನು, ಶಿವಾಲಯ ಕಟ್ಟಿಸಬಹುದು. ಆದರೆ ನನ್ನಂತಹ ಬಡವನಿಗೆ ಭೌತಿಕವಾಗಿ ದೇವಸ್ಥಾನ ಕಟ್ಟಿಸಲು ಸಾಧ್ಯವಿಲ್ಲ.

ಹಣವಿಲ್ಲದಿದ್ದರೆ ಏನಂತೆ, ಭಗವಂತ ಸೃಷ್ಟಿಸಿದ ನನ್ನ ದೇಹವೇ ಒಂದು ಪವಿತ್ರವಾದ ದೇವಸ್ಥಾನ. ನನ್ನ ಎರಡು ಕಾಲುಗಳೇ ಆ ಗುಡಿಯ ಕಂಬಗಳು, ನನ್ನೀ ದೇಹವೇ ಪವಿತ್ರ ಗರ್ಭಗುಡಿ ಹಾಗೂ ನನ್ನ ತಲೆಯೇ ಆ ದೇವಸ್ಥಾನದ ಮೇಲಿರುವ ಚಿನ್ನದ ಕಳಶವಾಗಿದೆ.

ಕಲ್ಲು, ಮಣ್ಣಿನಿಂದ ಕಟ್ಟಿದ ಭೌತಿಕ ದೇವಸ್ಥಾನಗಳಿಗೆ ಸ್ಥಾವರ ಎಂದಾದರೂ ಒಂದು ದಿನ ನಾಶವಿದೆ. ಆದರೆ ಚಲಿಸುವ, ಜೀವಂತವಾಗಿರುವ ಹಾಗೂ ಆತ್ಮಶುದ್ಧಿ ಹೊಂದಿರುವ ಜೀವಿಗೆ ಜಂಗಮ ಎಂದಿಗೂ ಅಳಿವಿಲ್ಲ. ಭಗವಂತ ಕಲ್ಲಿನ ಗುಡಿಯಲ್ಲಲ್ಲ, ನಮ್ಮ ಅಂತರಂಗದಲ್ಲಿ ನೆಲೆಸಿದ್ದಾನೆ. ಜೀವನದಲ್ಲಿ ವಚನಗಳು ಪಚನವಾದರೆ ನಾಡು ದೇಶ ಚನ್ನಾಗಿರುತ್ತದೆ. ನಾವು ನೀವು ಬಸವಾದಿ ಶರಣರ ವಚನಗಳ ಹಾದಿಯಲ್ಲಿ ಸಾಗೋಣ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

## ಗುರುರತ್ನ ಪ್ರಶಸ್ತಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಶಿಕ್ಷಕರಿಗೆ ತಂದ ಗೌರವ : ಹನುಮಂತಪ್ಪ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಗುರುರತ್ನ ಪ್ರಶಸ್ತಿಯು ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಮತ್ತು ಸಾಧನೆ ಮಾಡಿದ ಶಿಕ್ಷಕರಿಗೆ ನೀಡಲಾಗುವ ವಿಶೇಷ ಗೌರವವಾಗಿದ್ದು, ಶಿಕ್ಷಕರ ಪರಿಶ್ರಮ ಗುರುತಿಸಿ, ಪ್ರಶಸ್ತಿ ನೀಡಿರುವುದು ಶಿಕ್ಷಕರ ಕಾರ್ಯವೈಖರಿಗೆ ಮತ್ತಷ್ಟು ಪುಷ್ಟಿ ನೀಡಿದೆ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಂಪ್ಲಿ ತಾಲೂಕು ಅಧ್ಯಕ್ಷ ಹನುಮಂತಪ್ಪ ಹೇಳಿದರು.**

ಇತ್ತೀಚೆಗೆ ಬಳ್ಳಾರಿ ನಗರದ ಜೋಳದ ರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ನಡೆದ ಗುರುರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಂಪ್ಲಿ ತಾಲೂಕಿನ ನಾಲ್ಕು ಜನ ಶಿಕ್ಷಕರಿಗೆ ಗುರುರತ್ನ ಪ್ರಶಸ್ತಿ ನೀಡಿ ಗೌರವಿಸಿದ ನಂತರ ಮಾತನಾಡಿ, ಸರಕಾರಿ ಶಾಲೆಗಳಲ್ಲಿ ಕೆಲಸ ನಿರ್ವಹಿಸುವ ಶಿಕ್ಷಕರು ಯಾವುದೇ ರೀತಿಯ ಫಲಾಪೇಕ್ಷೆ ಇಲ್ಲದೆ ತಮ್ಮ ಕೆಲಸವನ್ನು ನಿಷ್ಟೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿದಾಗ ಪ್ರಶಸ್ತಿಗಳು ತಮ್ಮನ್ನು ಹುಡುಕಿಕೊಂಡು ಬರುತ್ತವೆ. ಈ ನಿಟ್ಟಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದವತಿಯಿಂದ ಶಿಕ್ಷಣ ಕ್ಷೇತ್ರ?ರದಲ್ಲಿ ಸಾಧನೆ ಮಾಡಿದ ಶಿಕ್ಷಕರಿಗೆ ಗುರುರತ್ನ ಪ್ರಶಸ್ತಿ ಪ್ರದಾನ ಮಾಡುವ ಮೂಲಕ ಶಿಕ್ಷಕರನ್ನು ಗೌರವಿಸಿರುವುದು ಹೆಮ್ಮೆಯ ಸಂಗತಿ ಎಂದರು.



ಇಲ್ಲಿನ ಸಮಾರಂಭದಲ್ಲಿ ಕಂಪ್ಲಿ ತಾಲೂಕಿನ ನಂ.10 ಮುದ್ದಾಪುರ ಗ್ರಾಪಂಂ–ಯ ಪ್ರಭುಕ್ಯಾಂಪಿನ ಸರ್ಕಾರಿ ಶಾಲೆಯ ಪ್ರಭಾರಿ ಮುಖ್ಯಗುರು ಪಿ.ವೀರಕುಮಾರ, ಮೆಟ್ರಿ ಶಿವಪುರ ಶಾಲೆಯ ಬಡ್ತಿ ಮುಖ್ಯಗುರು ರಾಮಚಂದ್ರಪ್ಪ, ಕಂಪ್ಲಿ ಪಟ್ಟಣದ ಎಂ.ಡಿ.ಕ್ಯಾಂಪ್ ಶಾಲೆಯ ಬಡ್ತಿ ಮುಖ್ಯಶಿಕ್ಷಕಿ ಅಗಳಿ ನಾಗರತ್ನ, ಹಂಪಾದೇವನಹಳ್ಳಿ ಗ್ರಾಪಂಯ ಜೀ–ರಿಗನೂರು ಶಾಲೆಯ ಸಹ ಶಿಕ್ಷಕ ಕೆ.ವಿರೇಶ ಇವರು ಗುರುರತ್ನ ಪ್ರಶಸ್ತಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡ ವೆಂಕಟೇಶ ಪ್ರಸಾದ್, ಮೇಯರ್ ಪಿ.ಗಾದೆಪ್ಪ, ಉಪ ಮೇಯರ್ ಮುಬಿನಾಬೀ, ಮಾಜಿ ಬುಡಾ ಅಧ್ಯಕ್ಷ ಉಮಯಾನ್‌ಖಾನ್, ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಲಿ, ಉಪಾಧ್ಯಕ್ಷ ಮಾರುತೇಶ, ಪ್ರಧಾನ ಕಾರ್ಯದರ್ಶಿ ಚೇತನ್ , ಸಂಘಟನಾ ಕಾರ್ಯದರ್ಶಿ ಸುಂದರೇಶ, ಬಳ್ಳಾರಿ ಜಿಲ್ಲಾಧ್ಯಕ್ಷ ಸಿ.ನಿಂಗಪ್ಪ, ಪ್ರಧಾನ ಕಾರ್ಯದರ್ಶಿ ಗುಂಡಪ್ಪನವರ್ ನಾಗರಾಜ, ಸರ್ಕಾರಿ ನೌಕರರ ಸಂಘದ ಕಂಪ್ಲಿ ತಾಲೂಕು ಅಧ್ಯಕ್ಷ ಹೆಚ್. ದೊಡ್ಡಬಸಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಂಪ್ಲಿ ಪ್ರಧಾನ ಕಾರ್ಯದರ್ಶಿ ಹೆಚ್.ಜಡೆಪ್ಪ, ಖಜಾಂಚಿ ಐ.ಗಂಗಮ್ಮ, ಕುರುಗೋಡು ಅಧ್ಯಕ್ಷ ತುಕಾರಾಂ ಗೊರವ, ಖಜಾಂಚಿ ಪಿ.ಶೇಕ್ಷಾವಲಿ, ಸೇರಿದಂತೆ ಗಣ್ಯರು, ಶಿಕ್ಷಕರು ಇದ್ದರು.

## ವಾತವರಣದಲ್ಲಿ ಏರುಪೇರು ಮಕ್ಕಳಲ್ಲಿ ಜಾಗೃತಿ: ಗೀತಾ ಹಿರೇಮಠ.

ನೈಜ್ಯ ದೆಸೆ ನ್ಯೂಸ್

**ವಾತಾವರಣದಲ್ಲಿ ಏರುಪೇರಾದ ಕಾರಣ ಮಕ್ಕಳಲ್ಲಿ ಜ್ವರ, ಶೀತ, ಕೆಮ್ಮು, ಸಾಮಾನ್ಯ ಲಕ್ಷಣ ಕಂಡುಬರುತ್ತವೆ. ಕೂಡಲೇ ರಕ್ತ ಪರೀಕ್ಷೆ ಮಾಡಿಸಿ, ಪೌಷ್ಠಿಕ ಆಹಾರವನ್ನು ಸೇವಿಸಿ, ಕ್ಷಯರೋಗ ಕುಷ್ಟರೋಗದ ಲಕ್ಷಣಗಳು, ತಂಬಾಕು ಸೇವನೆ, ಮಾದಕ ವಸ್ತುಗಳ ದುಶ್ಚಟದಿಂದ ದೂರವಿರಬೇಕು. ಆನೆ ಕಾಲು ರೋಗದ ನಿರ್ವಹಣೆ, ರಕ್ತಹೀನತೆ ಬಗ್ಗೆ ಮಕ್ಕಳಿಗೆ ಮಾಹಿತಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಹೇಳಿದರು.**



ಜಿಲ್ಲಾಡಳಿತ ಜಿಲ್ಲಾ ಪಂಚಾಯತ ರಾಜ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಆರೋಗ್ಯಾಧಿಕಾರಿಗಳ ಕಚೇರಿ ಸಿಂಧನೂರು ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರ ಇವರ ಸಂಯುಕ್ತಾಶ್ರಯದಲ್ಲಿ ವಿರುಪಾಪುರ ಆಯುಷ್ ಆರೋಗ್ಯ ಕೇಂದ್ರದ ವ್ಯಾಪ್ತಿಯ ವಿರುಪಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಸಾಂಕ್ರಾಮಿಕ ರೋಗಗಳ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಂಡು ಮಾತನಾಡಿದರು, ನಂತರ ವಿರೂಪಾಪುರ ಗ್ರಾಮದಲ್ಲಿ ಗಂಡಾಂತರ ಗರ್ಭಿಣಿಯರ ಮನೆಗೆ ಭೇಟಿ ಮಾಡಿ, ವಾತಾವರಣದ ಬದಲಾವಣೆ ಕಾರಣ ಸಾರ್ವಜನಿಕರಲ್ಲಿ ಮಕ್ಕಳಲ್ಲಿ ಜ್ವರ, ನೆಗಡಿ, ಕೆಮ್ಮು, ಇನ್ನಿತರೆ ಕಾಯಿಲೆ ಬರುವ ಸಂಭವ ಹೆಚ್ಚಿದ್ದು, ಮುನ್ನಚ್ಚರಿಕೆ ವಹಿಸಬೇಕು ಮಳೆ ಬರುವ ಹಿನ್ನೆಲೆ ಬಿಸಿ ಆಹಾರ ಸೇವನೆ, ನೀರನ್ನು ಕಾಯಿಸಿ, ಆರಿಸಿ, ಸೋಸಿ, ಕುಡಿಯಬೇಕು. ಗರ್ಭಿಣಿಯರಲ್ಲಿ ಜ್ವರದ ಲಕ್ಷಣ ಡೆಂಗ್ಯೂ ತೀವ್ರತರ ಜ್ವರ ಮೈ ಕೈ ನೋವು, ಸುಸ್ತು ಕಾಣಿಸಿಕೊಳ್ಳುತ್ತದೆ ಇದು ತಾಯಿ ಹಾಗೂ ಮಗುವಿನ ಮೇಲೆ ಪರಿಣಾಮ ಬೀರಬಹುದು. ತಕ್ಷಣ ವೈದ್ಯರ ಬಳಿ ರಕ್ತ ಪರೀಕ್ಷೆ ಮಾಡಿಸಬೇಕು. ಪ್ಯಾರಾಸಿಟಮಾಲ್ ಹೊರತುಪಡಿಸಿ ಇತರೆ ನೋವು ನಿವಾರಕಗಳನ್ನು ವೈದ್ಯರ ಸಲಹೆ ಇಲ್ಲದೆ ತೆಗೆದುಕೊಳ್ಳಬಾರದು. ಸೊಳ್ಳೆ ನಿವಾರಕ ಕ್ರಿಮ್ ಬಳಸುವುದು, ಪೂರ್ಣ ತೋಳಿನ ಬಟ್ಟೆಗಳನ್ನು ಧ–ರಿಸುವುದು, ಮನೆಯ ಸುತ್ತಲೂ ನೀರು ನಿಲ್ಲದಂತೆ ನೋಡಿಕೊಳ್ಳಬೇಕು, ರಾತ್ರಿ ಮಲಗುವಾಗ ಸೊಳ್ಳೆ ಪರದೆ ಹಾಕುವುದು, ಕುದಿಸಿ ಆರಿಸಿದ ನೀರು ಹಾಗೂ ಪೌಷ್ಠಿಕ ಆಹಾರ ಸೇವಿಸಿ ಎಂದು ತಿಳಿಸಲಾಯಿತು. ಈ ಸಂದರ್ಭದಲ್ಲಿ: ಇಸ್ಮಾಯಿಲ್ ಬಿ ಪಿಎಚ್.ಸಿಒ, ಶ್ರೀದೇವಿ ಸಿ.ಎಚ್‌ಒ, ಶಾಲೆ ಮುಖ್ಯ ಗುರು ರಮಾದೇವಿ, ಸಹ ಶಿಕ್ಷಕರಾದ ಸುನಿತಾ, ಪ್ರತಿಮಾ, ತಸ್ಲೀಮ್, ನಾಗರಾಜ, ಮರಿಯಪ್ಪ, ಆಶಾ ಕಾರ್ಯಕರ್ತೆ, ಭೀಮಮ್ಮ, ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಮೃದ್ಧ ಮಳೆ ಬೆಳೆಗಾಗಿ ಸಾಹಿತ್ಯ ಸಿರಿ ಪ್ರತಿಷ್ಠಾನವತಿಯಿಂದ ಮಳೆಗಾಗಿ ಕವಿಗೋಷ್ಠಿ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಸಮೃದ್ಧ ಮಳೆ ಬೆಳೆಗಾಗಿ ಸಂಕಲ್ಪಿಸಿ ಇದೇ ಮೊದಲ ಬಾರಿಗೆ ಪಟ್ಟಣದ ಸಾಹಿತ್ಯ ಸಿರಿ ಪ್ರತಿಷ್ಠಾನವು ಪಟ್ಟಣದಲ್ಲಿನ ಶ್ರೀ ವಾಸವಿ ಕನ್ನಡ ಹಿರಿಯ ಪ್ರಾಥ ಮಿತ ಅನುದಾನಿತ ಶಾಲೆಯಲ್ಲಿ ಮಳೆಗಾಗಿ ಕವಿಗೋಷ್ಠಿ ಅದ್ದೂರಿಯಾಗಿ ಜರುಗಿತು.**

ವಾಸವಿ ವಿದ್ಯಾಸಂಸ್ಥೆ ಉಪಾಧ್ಯಕ್ಷ ವಿ. ರಾಮಲಿಂಗಯ್ಯ ಶ್ರೇಷ್ಠಿ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿ, ಮಳೆಗಾಗಿ ಕವಿಗೋಷ್ಠಿ ಆಯೋಜಿಸಿದ್ದು ಸಾಹಿತ್ಯ ದೃಷ್ಟಿಯಿಂದ ಔಚಿತ್ಯವಾಗಿದೆ. ಮಳೆ ಸಮೃದ್ಧವಾಗಿ ಆಗಲು ಮತ್ತು ಮಳೆ ಕೊರತೆಗೆ ವೈಚಾರಿಕವಾಗಿಯೂ ಚಿಂತಿಸುವಲ್ಲಿ, ಯುವಜನತೆ ಮುಂದಾಗಬೇಕು ತಿಳಿಸಿದರು. ಸರಕಾರಿಯ ಬಾಲಕಿಯರ ಸರ್ಕಾರ ಪದವಿ ಪೂರ್ವ ಕಾಲೇಜ್ ಬಳ್ಳಾರಿಯ ಉಪನ್ಯಾಸಕ ಡಾ.ಯು.ಶ್ರೀನಿವಾಸಮೂರ್ತಿ ಕವಿಗೋಷ್ಠಿಯ ಅಧ್ಯಕ್ಷತೆವಹಿಸಿ ಮಾತನಾಡಿ, ಪದ್ಯ, ಗದ್ಯ ವಾಗಲಿ ಸಮಾಜಕ್ಕೆ ಸ್ಪಂದಿಸುವಂತಿರಬೇಕು. ಸಮಾಜ ಕಟ್ಟುವ ಸ್ಪಂದಿಸುವ ಮನವೇ ಆಮ್ಲಜನಕವಾಗಿದೆ. ಕವಿಗಳು ಕವಿತೆಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವಂತಾಗಬೇಕು, ಮೊಬೈಲ್ ಯುಗದಲ್ಲಿ ನಮ್ಮ ಮನಸ್ಸು ನಮ್ಮ ಕೈಲಿಲ್ಲ, ಓದುವವರು ಹತ್ತಾರು ದಿಕ್ಕಿನಲ್ಲಿ ಯೋಜಿಸುವಂತಿವಿರಬೇಕು. ಕವಿಗಳು ಜಾಗೃತಿ ತೋರಬೇಕು, ಕವಿತೆಗಳು ಗಟ್ಟಿತನ ದಿಂದ ಕೂಡಿರಬೇಕು. ಮಿಡಿಯುವ ಹೃದಯಗಳಲ್ಲಿ ಭಾವನೆಗಳನ್ನು ಕವಿತೆಗಳನ್ನಾಗಿ ಕಟ್ಟುವಲ್ಲಿ ಜೀವಂತವಾಗಿಟ್ಟುಕೊಳ್ಳಬೇಕು ಮಳೆ ವರ್ಣನೆ ಒಂದು ಸಾಲ ಘಟ್ಟವಾದರೆ ಈಗ ಮಳೆ ಬೇಡುವ ಕಾಲ ಇನ್ನೊಂದು ಘಟ್ಟವಾಗಿದ್ದು ಜಾಗೃತಿ ಕವಿತೆಗಳು ಬೇಕಿವೆ. ಜಾಗೃತಿ ಕವಿತೆ ಮುಂದಿನ ಪೀಳಿಗೆಗೆ ದೊಡ್ಡ ಕೊಡುಗೆಯಾಗಲಿದೆ ಎಂದರು.

ನಿರ್ದೇಶಕ ಜಿ.ತಿಪ್ಪಯ್ಯಶ್ರೇಷ್ಠಿ, ಪ್ರತಿಷ್ಠಾನದ ಅಧ್ಯಕ್ಷ ಬಿ.ಪ್ರಕಾಶ್, ಕಾರ್ಯಾಧ್ಯಕ್ಷ ಷಣ್ಮುಖಪ್ಪ ಚಿತ್ರಗಾರ್ ಮಾತನಾಡಿದರು. ಮಳೆ ಕವಿಗೋಷ್ಠಿಯಲ್ಲಿ ಮಳೆಯ ಔಚಿತ್ಯವನ್ನು ಸಾರಿದವು. ಕವಿಗಳು ವಾಚಿಸಿದ ಕವಿತೆಯ ಕೆಲ ಸಾಲುಗಳು ಗಮನ ಸೆಳೆದವು. ಎಸ್.ಎಂ.ಪ್ರಭಾವತಿಯ ಮನೆಯನ್ನು ನೆನೆಯುತಲಿ ಕವಿತೆಯಲ್ಲಿ ನಂಬಿಕೆಗಳ ಬದಿಗಿಡೋಣ, ವೀರಮ್ಮ ನಾಗರಾಜ ಅವರ ಕವಿತೆ ಮಳೆ ಬಂದಾರೆ ಬಂದು ಬಿಡು ಮಳೆ ತಾಯಿ ಮಗುವ ಬರುವಂತೆ, ದುಃಖತಪ್ತ ಹೆಣ್ಣಂದು ಗಳಗಳನೆ ಅಳುವಂತೆ, ರಮೇಶ್ ಸಾಗೇನಹಳ್ಳಿಯವರ ಅನ್ನದಾತನ ಸ್ವಗತ, ಮಳೆ ಬರಲಿ ಎಂದು ಡಾ.ಬಿ. ಸುನಿಲ್‌ರವರ ಸೃಷ್ಟಿಯ ವ್ಯಕ್ತಿ ಕವಿತೆಯಲ್ಲಿ ನೀ ಕೊಟ್ಟುದನೆಲ್ಲ ಕಾಯದೆ ಹೋದರೆ ಸೃಷ್ಟಿಯ ನಿಯಮನೆ ಏನರ್ಥ, ಸಿ.ಡಿ.ಕುಮಾರ್ ರ



ಅನ್ನವಿಲ್ಲ ರೈತನ ತಟ್ಟೆಯಲ್ಲಿ ಬಲವಿಲ್ಲ ಉಳುವವ ಯೋಗಿಯ ರಟ್ಟೆಯಲ್ಲಿ, ಮದುಕಪ್ಪ ನೆಲಜೇ–ರಿಯ ಮಳೆ ಮತ್ತು ಎಮ್ಮೆ, ಬಡಿಗೇರ್ ಜಿಲಾನ ರವರ ಸತ್ತ ಮೀನುಗಳ ರಾಶಿಯಲ್ಲಿ ರೈತನ ಆಕ್ರಂದನದ ಕೂಗು, ಕಣ್ಣಲಿ ಕಣ್ಣೀರಿನ ಕಡಲು, ಹೀಗೆ ಕವಿತೆಯ ಸಾಲುಗಳು ಮಳೆಯ ಔಚಿತ್ಯವನ್ನು ಸಾರಿ ಹೇಳಿದವು.

ಕವಿಗೋಷ್ಠಿಯಲ್ಲಿ ಕವಿಗಳಾದ ಬಿ.ಪ್ರಕಾಶ್, ಪೀರಾಸಾಬ್ ಹಂಚಿನಾಕ್ ಹೀರಾಪಲಿ, ರಾಜು ಬಿಲಂಕರ್, ಎಸ್.ಶಾಮಸುಂದರಾವ್, ಜಿಲಾನ್ ಸಾಬ್ ಬಡಿಗೇರ, ಸಾಹಿತ್ಯ ಬಿಲಂಕರ್, ಚಂದ್ರಯ್ಯ ಸೊಪ್ಪಿಮಠ, ಆಶೋಕ ಕುನೂರು. ಎಸ್.ರಾಮಪ್ಪ, ಪರ ಶುರಾಮ ಪವಾರ್, ಸಂತೋಷ್ ಸೋಗಿ, ಬಡಿಗಿ ದೊಡ್ಡ ಮಂಜುನಾಥ, ಆನ್‌ಲೈನ್ ಮೂಲಕ ಚಿನಬದುಳಿಯ ಎಚ್.ಟಿ.ಗಿರೀಶ್, ನಾಗಮಂಗಲದ ಎನ್.ಸಿ.ಶಿವು ಕುಮಾರ್, ಎಮ್ಮಿಗನೂರಿನ ಬೇರ್ಗಿ ಜಯಶ್ರೀ ಕವಿತೆ ವಾಚಿಸಿದರು. ಜ್ಞಾನಿತಾರೆಡ್ಡಿ ಪ್ರಾರ್ಥಿಸಿದರು, ಚಂದ್ರಯ್ಯ ಸೊಪ್ಪಿಮಠ ಸ್ವಾಗತಿಸಿದರು. ಎಸ್.ಶಾಮಸುಂದರರಾವ್ ವಂದಿಸಿದರು. ರಾಜು ಬಿಲಂಕರ್ ನಿರೂಪಿಸಿದರು.

## ಮನೆಯಲ್ಲಿ ಆಹಾರ ಸಿದ್ದಪಡಿಸುವಾಗ ವಹಿಸುವ ಕಾಳಜಿಯನ್ನು ವಸತಿ ನಿಲಯದಲ್ಲಿಯೂ ವಹಿಸಿ:

ನೈಜ್ಯ ದೆಸೆ ನ್ಯೂಸ್

**ಪೋತ್ನಾಳ: ಕುಟುಂಬದ ಸದಸ್ಯರಿಗೆ ಮನೆಯಲ್ಲಿ ಆಹಾರ ತಯಾರಿಸುವಾಗ ವಹಿಸುವ ಕಾಳ–ಜಿಯನ್ನು ವಹಿಸುವ ಮೂಲಕ ಆಹಾರ ಕಲುಷಿತವಾದಾಗ ಅಥವಾ ಕುಡಿಯುವ ನೀರು ಕಲುಷಿತವಾದಾಗ ಉಂಟಾಗುವ ಸಾಂಕ್ರಾಮಿಕ ರೋಗಗಳನ್ನು ತಡೆಯಲು ಸಾಧ್ಯವಾಗುವುದು ಎಂದು ಪೋತ್ನಾಳ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಶೇಖ್ ಇಕ್ಬಾಲ್ ತಿಳಿಸಿದರು.**

ಜಿಲ್ಲಾಧಿಕಾರಿಗಳು ರಾಯಚೂರು ರವರ ನಿರ್ದೇಶನದಂತೆ ಆರೋಗ್ಯ ಇಲಾಖೆಯ ವೈದ್ಯಕೀಯ ತಂಡ ವಸತಿ ನಿಲಯ, ವಸತಿ ಶಾಲೆಗಳಿಗೆ ಬೇಟಿ ನೀಡುವ ಭಾಗವಾಗಿ ಪೋತ್ನಾಳದ ಡಿ ದೇವರಾಜ್ ಅರಸು ಮೇಟ್ರೀಕ್ ಪೂರ್ವ ಬಾಲಕರ ವಸತಿ ನಿಲಯ ಹಾಗೂ ಅಡವಿ ಅಮರೇಶ್ವರ ಗ್ರಾಮದ ಡಾ ಬಿ.ಅಸರ್ ಅಂಬೇಡ್ಕರ್ ಮೇಟ್ರೀಕ್ ಪೂರ್ವ ಬಾಲಕರ ವಸತಿ ನಿಲಯಗಳಿಗೆ ಜಿಲ್ಲಾ ಐಇಸಿ ತಂಡದೊಂದಿಗೆ ಬೇಟಿ ಆರೋಗ್ಯ ಜಾಗೃತಿ ನೀಡಿ ಮಾತನಾಡುತ್ತಾ, ಅಡುಗೆ ತಯಾರಿಸುವ ಎಲ್ಲ ಸಿಬ್ಬಂದಿಯವರು ಆಹಾರ ಪದಾರ್ಥಗಳ ಸ್ವಚ್ಚಗೊಳಿಸಿದ ನಂತರ ಅಡುಗೆ ಮಾಡಿ ಮಕ್ಕಳಿಗೆ ಊಣ ಬಡಿಸುವ ತನಕ ನಿಗಾವಹಿಸಬೇಕು. ಮುಖ್ಯವಾಗಿ ಅಡುಗೆಯವರು ನಿಯಮಿತವಾಗಿ ಆರೋಗ್ಯ ಪರೀಕ್ಷೆ ಮಾಡಿಸಬೇಕು. ತಲೆಗೆ ಕ್ಯಾಪ್, ಎಪ್ರಾನ್ ಧರಿಸಲು, ಉಗುರು ಸ್ವಚ್ಚವಾಗಿಟ್ಟುಕೊಳ್ಳಲು ತಿಳಿಸಿದರು.



ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ಮಾತನಾಡಿ, ವಸತಿ ನಿಲಯಗಳಲ್ಲಿಯ ನೀರಿನ ಸಂಪು ನೀರು ಸಂಗ್ರಹಕಗಳ ಒಳಭಾಗವನ್ನು ನಿಯಮಾನುಸಾರ ಸ್ವಚ್ಚಗೊಳಿಸಬೇಕು, ಆಹಾರ ಪದಾರ್ಥಗಳ ದಾಸ್ತಾನು ಕೊಠಡಿಯಲ್ಲಿ ನೆಲದಲ್ಲಿ ಕಾಯಿಪಲ್ಯೆ ಹಾಕದಂತೆ, ಧವಸ, ದಾನ್ಯಗಳಲ್ಲಿ ಇಲಿ ಇತರೆ ಕೀಟಗಳು ಬರದಂತೆ ನಿಗಾವಹಿಸಬೇಕು. ಅಡುಗೆ ಪಾತ್ರೆ, ಸಾಮಗ್ರಿಗಳ ಸ್ವಚ್ಚತೆ ಕೈಗೊಳ್ಳುವ ಸ್ಥಳದಲ್ಲಿ ಸರಾಗವಾಗಿ ನೀರು ಹರಿದು ಹೋಗುವುದನ್ನು ಖಾತ್ರಿ ಮಾಡಿಕೊಳ್ಳಬೇಕು. ಆಹಾರ ಸಿದ್ದಪಡಿಸುವ ಪೂರ್ವ ಕೈಗಳನ್ನು ತೊಳೆದುಕೊಳ್ಳಬೇಕು. ಆಹಾರ ಸೇವಿಸುವ ಪೂರ್ವದಲ್ಲಿ ಹಾಗೂ ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳುವುದನ್ನು ಮರೆಯಬಾರದು, ವೈಯಕ್ತಿಕ ಸ್ವಚ್ಚತೆಯನ್ನು ಬಿಸಿಯಾದ ಆಹಾರ ಸೇವಿಸಲು ವಿದ್ಯಾರ್ಥಿಗಳಲ್ಲಿ ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ, ಈಶ್ವರ ಹೆಚ್ ದಾಸಪ್ಪನವರ, ಹಿರಿಯ ಹೆಚ್‌ಐಓ ಶರಣಪ್ಪ, ಹಿರಿಯ ಪಿಹೆಚ್‌ಸಿಓ ಚೈತ್ರಾ, ಹೆಚ್‌ಐಓ, ವಿಶ್ವರಾಧ್ಯ, ಆಶಾ ಕಾರ್ಯಕರ್ತೆ ದೇವಿ ಸೇರಿದಂತೆ ಅಡುಗೆ ಸಿಬ್ಬಂದಿಯವರು ಉಪಸ್ಥಿತರಿದ್ದರು.

# ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ‘ತೆರೆದ ಮನೆ’ ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಕಾನೂನು, ಮಾದಕವಸ್ತು ವಿರೋಧಿ ಹಾಗೂ ಸುರಕ್ಷತಾ ಜಾಗೃತಿ

**ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ "ತೆರೆದ ಮನೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀಕೃಷ್ಣ ದೇವರಾಯ ಸೈನಿಕ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದು, ಪೊಲೀಸ್ ಇಲಾಖೆಯ ಕಾರ್ಯವೈಖರಿ, ಕಾನೂನು, ಸುರಕ್ಷತೆ ಹಾಗೂ ಸಾಮಾಜಿಕ ಜವಾಬ್ದಾರಿಗಳ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಲಾಯಿತು.**

ಕಾರ್ಯಕ್ರಮದಲ್ಲಿ ಸಿಂಧನೂರು ಗ್ರಾಮೀಣ ಸಿಪಿಐ ಹಾಗೂ ಪಿಎಸ್‌ಐ ಅವರು ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿ, ಪೊಲೀಸ್ ಠಾಣೆಯ ಕಾರ್ಯನಿರ್ವಹಣೆ, ಸಾರ್ವಜನಿಕರೊಂದಿಗೆ ಪೊಲೀಸರ ಸಂಪರ್ಕ ಹಾಗೂ ತುರ್ತು ಸಂದರ್ಭಗಳಲ್ಲಿ ಪೊಲೀಸ್ ಇಲಾಖೆಯನ್ನು ಹೇಗೆ ಸಂಪರ್ಕಿಸಬೇಕು ಎಂಬುದರ ಕುರಿತು ವಿವರಿಸಿದರು. ವಿದ್ಯಾರ್ಥಿಗಳಿಗೆ ಪೊಲೀಸ್ ಇಲಾಖೆಯ ವಿವಿಧ ಸಹಾಯವಾಣಿ ಸಂಖ್ಯೆಗಳು ಹಾಗೂ ಸೇವೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಯಾವುದೇ ತೊಂದರೆ, ಅಪಾಯ ಅಥವಾ ಕಾನೂನು



ಸಂಬಂಧಿತ ಸಮಸ್ಯೆ ಎದುರಾದ ಸಂದರ್ಭದಲ್ಲಿ ಭಯಪಡದೆ ಸಂಬಂಧಪಟ್ಟ ಅಧಿಕಾ–ರಿಗಳನ್ನು ಸಂಪರ್ಕಿಸುವಂತೆ ತಿಳಿಸಲಾಯಿತು.

ಮಾದಕ ವಸ್ತುಗಳ ವಿರುದ್ಧ ಜಾಗೃತಿ ಯುವಜನರಲ್ಲಿ ಹೆಚ್ಚುತ್ತಿರುವ ಮಾದಕ ವಸ್ತುಗಳ ಬಳಕೆಯ ಅಪಾಯದ ಕುರಿತು ವಿಶೇಷವಾಗಿ ಜಾಗೃತಿ ಮೂಡಿಸಲಾಯಿತು. ಡ್ರಗ್ಸ್ ಸೇವನೆಯಿಂದ ಆರೋಗ್ಯ, ಶಿಕ್ಷಣ, ಕುಟುಂಬ ಮತ್ತು ಭವಿಷ್ಯದ ಮೇಲೆ ಉಂಟಾಗುವ ಗಂಭೀರ ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು. ಮಾದಕ ವಸ್ತುಗಳ ಸಾಗಣೆ, ಮಾರಾಟ ಮತ್ತು ಸೇವನೆಗೆ ಸಂಬಂಧಿಸಿದ ಕಾನೂನು ಕ್ರಮಗಳ ಬಗ್ಗೆ ವಿವರಿಸಿ, ಎನ್.ಡಿ.ಪಿ.ಎಸ್. ಕಾಯ್ದೆಯ ಮಹತ್ವವನ್ನು ತಿಳಿಸಲಾಯಿತು. ವಿದ್ಯಾರ್ಥಿಗಳು ಯಾವುದೇ ರೀತಿಯ ಮಾದಕ ವಸ್ತುಗಳ ಆಮಿಷಕ್ಕೆ ಒಳಗಾಗದೆ, ತಮ್ಮ ಸ್ನೇಹಿತರಲ್ಲಿಯೂ ಜಾಗೃತಿ ಮೂಡಿಸುವಂತೆ ಪೊಲೀಸ್ ಅಧಿಕಾರಿಗಳು ಕರೆ ನೀಡಿದರು.

ಸಂಚಾರ ನಿಯಮಗಳ ಪಾಲನೆ ವಿದ್ಯಾರ್ಥಿಗಳಿಗೆ ಸಂಚಾರ ನಿಯಮಗಳು ಮತ್ತು ರಸ್ತೆ ಸುರಕ್ಷತೆ ಕುರಿತು ಅರಿವು ಮೂಡಿಸಲಾಯಿತು. ವಾಹನ ಚಾಲನೆ ಸಂದರ್ಭದಲ್ಲಿ ಹೆಲ್ಮೆಟ್ ಧ–ರಿಸುವುದು, ಸಂಚಾರ ಸಂಕೇತಗಳನ್ನು ಪಾಲಿಸುವುದು, ವೇಗದ ಚಾಲನೆ ತಪ್ಪಿಸುವುದು ಹಾಗೂ ರಸ್ತೆ ಬಳಕೆದಾರರ ಸುರಕ್ಷತೆಗೆ ಆದ–್ಯತೆ ನೀಡುವ ಕುರಿತು ಮಾಹಿತಿ ನೀಡಲಾಯಿತು.

ಬಾಲ್ಯವಿವಾಹ ಮತ್ತು ಪೋಕ್ಸೋ ಕಾಯ್ದೆ ಬಾಲ್ಯವಿವಾಹದ ದುಷ್ಪರಿಣಾಮಗಳು ಹಾಗೂ ಬಾಲ್ಯವಿವಾಹ ತಡೆಗೆ ಇರುವ ಕಾನೂನು ಕ್ರಮಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದಿಂದ ರಕ್ಷಣೆ ನೀಡುವ ಪೋಕ್ಸೋ ಕಾಯ್ದೆಯ ಪ್ರಮುಖ ಅಂಶಗಳನ್ನು ಸರಳವಾಗಿ ವಿವರಿಸಿ, ಯಾವುದೇ ರೀತಿಯ ಕಿರುಕುಳ ಅಥವಾ ದೌರ್ಜನ್ಯ ಎದುರಾದರೆ ವಿಶ್ವಾಸಾರ್ಹ ವ್ಯಕ್ತಿಗಳು ಮತ್ತು ಪೊಲೀಸ್ ಇಲಾಖೆಯ ನೆರವು ಪಡೆಯುವಂತೆ ತಿಳಿಸಲಾಯಿತು.

ಪೊಲೀಸರೊಂದಿಗೆ ವಿದ್ಯಾರ್ಥಿಗಳ ಸಂವಾದ "ತೆರೆದ ಮನೆ" ಕಾರ್ಯಕ್ರಮದ ಉದ್ದೇಶದಂತೆ ವಿದ್ಯಾರ್ಥಿಗಳಿಗೆ ಪೊಲೀಸ್ ಠಾಣೆಯ ಬಗ್ಗೆ ಇರುವ ಭಯ ಮತ್ತು ಅನುಮಾನಗಳನ್ನು ದೂರ ಮಾಡಿ, ಪೊಲೀಸರು ಸಾರ್ವಜನಿಕರ ಸುರಕ್ಷತೆಗಾಗಿ ಸದಾ ಕಾರ್ಯನಿರ್ವಹಿಸುವ ಇಲಾಖೆಯಾಗಿದ್ದಾರೆ ಎಂಬ ಅರಿವು ಮೂಡಿಸಲಾಯಿತು. ವಿದ್ಯಾರ್ಥಿಗಳು ಪೊಲೀಸ್ ಅಧಿಕಾರಿಗಳೊಂದಿಗೆ ಸಂವಾದ ನಡೆಸಿ ವಿವಿಧ ಕಾನೂನು ಹಾಗೂ ಸುರಕ್ಷತಾ ವಿಚಾರಗಳ ಕುರಿತು ಪ್ರಶ್ನೆಗಳನ್ನು ಕೇಳಿದರು. ಅಧಿಕಾರಿಗಳು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸೂಕ್ತ ಮಾಹಿತಿ ನೀಡಿ, ಕಾನೂನು ಪಾಲನೆ ಮತ್ತು ಸಾಮಾಜಿಕ ಜವಾಬ್ದಾರಿಯ ಮಹತ್ವವನ್ನು ತಿಳಿಸಿದರು.

ಕೊನೆಯಲ್ಲಿ, "ಮಾದಕ ವಸ್ತುಗಳಿಂದ ದೂರವಿರಿ ಕಾನೂನು ಪಾಲಿಸಿ ಸುರಕ್ಷಿತವಾಗಿ ಸಂಚರಿಸಿಮಕ್ಕಳ ಹಕ್ಕುಗಳನ್ನು ಗೌರವಿಸಿ" ಎಂಬ ಸಂದೇಶದೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101